ಕೊಡಗು ಸಂಗಾತಿ

ಸಂಪಾದಕಿ : ಪಟ್ಟಡ ಶೀಲಾಮಣಿ

ಕನ್ನಡ ಮತ್ತು ಗೌಡ ಕನ್ನಡದ ಏಕೈಕ ಪಾಕ್ಷಿಕ ಪತ್ರಿಕೆ

K.R.N.N. 240 ಸಂಪುಟ 2 ಸಂಚಿಕೆ 20 ಅಕ್ಟೋಬರ್ 16-31, 1998 ಪುಟಗಳು : 24 ರೂ. 5




(ಲೇಖನ ಒಳಪುಟಗಳಲ್ಲಿ)

"ಭಾರತ್ ಶ್ರೀ" ಮತ್ತು "ಭಾರತ್ ಗೌರವ್" ಪ್ರಶಸ್ತಿಗಳ ಸರದಾರ

ಯುವ ಜನಾಂಗದ ಭೀಷ್ಮ ಶ್ರೀ ಕೊರಿಯಾರು ಅಪ್ಪಣ್ಣ ರವಿಕುಮಾರ್ (ಸತ್ಯ)

ಚಂದದಾರರು ಮತ್ತು ಜಾಹೀರಾತುದಾರರಿಗೆ ದೀಪಾವಳಿ ಮತ್ತು ಕಾವೇರಿ ಸಂಕ್ರಮಣದ ಶುಭಾಶಯಗಳು



ಯುವ ಪ್ರತಿಭೆ

1998–99ನೇ ಸಾಲಿಗೆ ಮಡಿಕೇರಿ ಫೀಲ್ಡ್ ಮಾರ್ಶಲ್ ಕಾರ್ಯಪ್ಪ ವಿಶ್ವವಿದ್ಯಾನಿಲಯದ [Field Marshal K. M. Cariappa Collage] ಉಪಾಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಂತಿಮ ಬಿ. ಎ.ಯಲ್ಲಿ ವ್ಯಾಸಂಗ ಮಾಡುತ್ತಿರುವ ಸಬ್ಬಂಡ್ರ ಕೆ. ಜಗದೀಶ ತನ್ನ ಎದುರಾಳಿ ಪ್ರತಿಸ್ಪರ್ಧಿಯನ್ನು ಬಾರಿ ಬಹುಮತಗಳಿಂದ ಸೋಲಿಸಿ ಕಾಲೇಜ್ ಯೂನಿಯನ್ನಿನ ಉಪಾಧ್ಯಕ್ಷರಾಗಿ ಆಯ್ಕೆಗೊಂಡಿದ್ದಾನೆ.

ಇವನು ಸುಂಟಿಕೊಪ್ಪ ನಿವಾಸಿ ಸಬ್ಬಂಡ್ರ ಕುಶಾಲಪ್ಪ ಮತ್ತು ಶ್ರೀಮತಿ ಚಿನ್ನಮ್ಮ ಕುಶಾಲಪ್ಪನವರ ಪುತ್ರ. ಇವರು ಮೂಲತಃ ಮಡಿಕೇರಿ ತಾಲ್ಲೂಕು ಪಕ್ಕಂದೂರು ಗ್ರಾಮದವರು.

Senior College, Marshal K.M. Cariappa College ಎಂದು ಮರುನಾಮಕಗೊಂಡ ಮೇಲೆ ಗೌಡ ಜನಾಂಗದಲ್ಲಿ ಉಪಾಧ್ಯಕ್ಷನಾಗಿ ಆಯ್ಕೆಯಾದವರಲ್ಲಿ ಇವನೇ ಮೊದಲಿಗ. ಈ ವರ್ಷ ತನ್ನ 50ನೇ ಹುಟ್ಟುಹಬ್ಬದ ಸುವರ್ಣ ಮಹೋತ್ಸವವನ್ನು ಆಚರಿಸಲಿರುವ ಕಾಲೇಜು ಮುಂದೆಯೂ ವಜ್ರಮಹೋತ್ಸವವನ್ನು ಆಚರಿಸುತ್ತ ವಿದ್ಯಾರ್ಥಿಗಳಿಗೆ ಉತ್ತಮ ಮಾರ್ಗದರ್ಶನ ನೀಡಲಿ ಎಂದು ಹಾರೈಸುತ್ತ, ಉಪಾಧ್ಯಕ್ಷನಾಗಿ ಆಯ್ಕೆ ಆಗಿರುವ ಜಗದೀಶನಿಗೆ ಉತ್ತಮ ಭವಿಷ್ಯವನ್ನು ಭಗವಂತನು ನೀಡಲೆಂದು ಸಂಗಾತಿ ಹಾರೈಸುತ್ತದೆ.

ಕೊಡಗು ಸಂಗಾತಿ

ಸಂಪಾದಕಿ, ಪ್ರಕಾಶಕಿ :

ಪಟ್ಟಡ ಪಿ. ಶೀಲಾಮಣಿ

ಗೌರವ ಸಂಪಾದಕ :

ಪಟ್ಟಡ ಎಂ. ಪ್ರಭಾಕರ

ಮುದ್ರಕರು :

ಮಣ್ಣಂಡ್ರ ಕೆ. ತಮ್ಮಯ್ಯ

ಚಂದಾ ಕಳುಹಿಸುವ ಮತ್ತು
ಜಾಹೀರಾತು ಪ್ರಸಾರ ಕಛೇರಿ :

ಕೊಡಗು ಸಂಗಾತಿ
ನಂ. 35, "ಸವಿತಾ ನಿಲಯ"
1ನೇ ಕ್ರಾಸ್, 4ನೇ ಬ್ಲಾಕ್,
ಡಿವಿಜನಲ್ ಟೆಲಿಕಾಂ ಕಛೇರಿ ಹತ್ತಿರ,
ಜಯಲಕ್ಷ್ಮಿಪುರಂ, ಮೈಸೂರು–12.
ಫೋನ್ : 0821/516771

–ಸಂಪರ್ಕಿಸುವ ವಿಳಾಸ–

ಮಣಿ ನಂಗಾರ್
C/o ನಂಗಾರ್ ಆಡಿಯೋ & ವೀಡಿಯೊ
ಹೊಳ್ಳ ಕಾಂಪ್ಲೆಕ್ಸ್, ಮಂಗಳೂರು ರಸ್ತೆ,
ಚಿಕ್ಕಪೇಟೆ, ಮಡಿಕೇರಿ–571 201
ದೂರವಾಣಿ : 08272/29372

ಬೈತಡ್ಕ ಜಾನಕಿ ಬೆಳ್ಯಪ್ಪ
ನಂ. 16, ಎಲ್.ಐ.ಸಿ. ಹತ್ತಿರ
ರೇಸ್ ಕೋರ್ಸ್ ರಸ್ತೆ, ಮಡಿಕೇರಿ
ದೂರವಾಣಿ : 08272/28047

ಕುಂಭಗೌಡನ ಪೂವಣ್ಣ
ಮಯೂರ ಕೋಲ್ಡ್ ಸ್ಟೋರೇಜ್
ಮುಖ್ಯ ರಸ್ತೆ, ಕುಶಾಲನಗರ–571237

ಅಮ್ಮಾಜೀರ ಪೊನ್ನಪ್ಪ ಅಥವಾ
ಕಲ್ಲುಮುಟ್ಲು ಬಸಪ್ಪ
20, 1ನೇ ಮೈನ್, 4ನೇ ಕ್ರಾಸ್
ಸಾಕಮ್ಮ ಗಾರ್ಡನ್, ಬಸವನಗುಡಿ,
ಬೆಂಗಳೂರು-04
ದೂರವಾಣಿ–080/642822

ಒಳನೋಟ

ಪುಟಗಳು

ಅರೆ ಭಾಷೆಕ ವಿಭಾಗ

ಚಂದಾ ವಿವರ

ಬಿಡಿ ಪ್ರತಿ	:	5 ರೂ.
ಅರ್ಧ ವಾರ್ಷಿಕ	:	60 ರೂ.
ವಾರ್ಷಿಕ ಚಂದಾ	:	120 ರೂ.

ಸಂಪಾದಕೀಯ:

ಕೊಡಗಿನ ಐನ್ ಮನೆಗಳು

'ಐನ್' ಎಂದರೆ ಮೂಲ ಎಂದರ್ಥದಲ್ಲೂ, ಮನೆ ಅಂದರೆ ಒಂದು ಕುಟುಂಬದ ಮೂಲ ಪುರುಷ ನೆಲೆ ನಿಂತು ಕಟ್ಟಿಸಿದ ಮನೆಗೆ ಮೂಲಮನೆ ಅಥವಾ ಐನ್ ಮನೆ ಎಂದರ್ಥ. ಈ ಐನ್ ಮನೆಯಲ್ಲಿದ್ದ ಮೂಲ ಪುರುಷನ ಮಕ್ಕಳು, ಮೊಮ್ಮಕ್ಕಳು ಹಿಂದಿನ ಕಾಲದಲ್ಲಿ ಒಂದೇ ಅಡುಗೆಯಲ್ಲಿದ್ದು, ಮಾಡುತ್ತಿದ್ದ ಅಡುಗೆಯನ್ನು ತೊಂಬಾರದ ಅಡುಗೆ ಎಂದು ಕರೆಯುತ್ತಿದ್ದರು. ಮನೆಗೆ ಯಜಮಾನನನ್ನು ಪಟ್ಟೆದಾರನೆಂದು ಕರೆಯುತ್ತಿದ್ದರು. ಪಟ್ಟೆದಾರ ಎಂದರೆ ಕುಟುಂಬದ ಭೂಮಿಯ ಪಟ್ಟಿ [**Records of Right**] ಮನೆಯ ಯಜಮಾನನ ಹೆಸರಿನಲ್ಲಿ ನಡೆದು ಬರುತ್ತಿದ್ದುದರಿಂದ ಅವರಿಗೆ ಪಟ್ಟೆದಾರ ಅಥವಾ ಕುಟುಂಬದ ಯಜಮಾನರೆಂದು ಕರೆಯುತ್ತಾರೆ.

ಐನ್ ಮನೆಯಲ್ಲಿ ಒಂದು ಕೈಯ್ಯಾಲೆ [Varanda] ಒಂದು ಬಾಡೆ [Hall] ಬಾಡೆಯ ಒಂದು ಕಡೆ ಅಡಿಗೆ ಮನೆ ಇದ್ದು ಬಾಡೆಯ ಸುತ್ತಲೂ ಬೇರೆ ಬೇರೆ ಕೋಣೆಗಳಿರುತ್ತವೆ. ಅಡಿಗೆ ಮನೆಯನ್ನು 'ಉಂಬೊಳಗೆ' ಎಂದು ಕರೆಯುತ್ತಾರೆ. ಈ ಉಂಬೊಳಗೆಯಲ್ಲಿಯೇ ಕುಟುಂಬದ ಎಲ್ಲಾ ಸದಸ್ಯರಿಗೆ ಅಡಿಗೆ ಮಾಡಿ ಊಟ ಬಡಿಸುತ್ತಾರೆ. ಅಡಿಗೆ ಮನೆಯ ಜವಾಬ್ದಾರಿಯನ್ನು ಮನೆಯ ಯಜಮಾನಿ ನೋಡಿಕೊಳ್ಳುತ್ತಾರೆ. ವೆಂಕಟರಮಣ ದೇವರ ಮುಡುಪನ್ನು ಐನ್ ಮನೆಯ ಅಟ್ಟದಲ್ಲಿಟ್ಟಿರುತ್ತಾರೆ.

ಜನಸಂಖ್ಯೆ ಹೆಚ್ಚಾದ ಹಾಗೆ ಐನ್ ಮನೆಯ ಸುತ್ತಲೂ ಕೋಣೆಗಳನ್ನು ವಿಸ್ತರಿಸಿದುದಕ್ಕೆ ಹೊಸಾರವೆಂದು ಕರೆಯುತ್ತಾರೆ. ಈ ಹೊಸಾರವೂ ಸಾಲದಿದ್ದ ಪಕ್ಷದಲ್ಲಿ ಐನ್ ಮನೆ ಜೊತೆಯಲ್ಲಿಯೇ ಮನೆಕಟ್ಟಿಕೊಳ್ಳುವುದಕ್ಕೆ 'ಅಲ್‌ಪರೆ' ಎಂಬುದಾಗಿ ಕರೆಯುತ್ತಾರೆ. ಇದಲ್ಲದೆ ಐನ್ ಮನೆಯಿಂದ ಬಹಳ ದೂರದಲ್ಲಿರುವ ಗದ್ದೆಯ ಹತ್ತಿರ ಮನೆ ಕಟ್ಟುವುದಕ್ಕೆ 'ಕೊಪ್ಪ' ಎಂದು ಕರೆಯುತ್ತಾರೆ.

ಕುಟುಂಬದ ಎಲ್ಲರೂ ಹಿಂದೆ ಒಂದೇ ಕಡೆಯಲ್ಲಿ ಊಟ ಮಾಡುತ್ತಿದ್ದರು. ದಿನಕಳೆದಂತೆ ಮಕ್ಕಳು, ಮೊಮ್ಮಕ್ಕಳು, ಮರಿಮಕ್ಕಳು ಹೆಚ್ಚಾದಂತೆ ಕುಟುಂಬದ ಸದಸ್ಯರು ತಮ್ಮ ಜೀವನಾಂಶವನ್ನು ಕೇಳಿಕೊಂಡು ಒಕ್ಕುಟುಂಬದಿಂದ ಬೇರೆಯಾಗುತ್ತಿದ್ದರು. ಅವರು ಬೇರೆ ಹೋದರೂ ಶುಭ-ಅಶುಭ ಕಾರ್ಯಗಳಲ್ಲಿ, ಹಬ್ಬ ಹರಿದಿನಗಳಲ್ಲಿ ಕುಟುಂಬದವರೆಲ್ಲಾ ಜೊತೆ ಸೇರಿ ಆಚರಿಸಿ ಊಟ ಉಪಚಾರವನ್ನು ಮಾಡುತ್ತಿದ್ದರು. ಹುತ್ತರಿ ಹಬ್ಬವನ್ನು ಕುಟುಂಬದ ಸದಸ್ಯರೆಲ್ಲಾ ಸೇರಿ ವಿಜೃಂಭಣೆಯಿಂದ ಆಚರಿಸುತ್ತಿದ್ದರು. ಮನೆಯ ದೇವರಿಗೆ, ದೆವ್ವಗಳಿಗೆ ಹರಿಸೇವೆ, ದೆವ್ವದ ಕೋಲ, ಭೂಮಿ ದೆವ್ವಗಳಿಗೆ ಕೊಡುವ ಸಮಯದಲ್ಲಿ ಕುಟುಂಬದವರೆಲ್ಲರೂ ಸೇರುತ್ತಾರೆ. ಆದರೆ ಈಗ ಕೆಲವು ಐನ್ ಮನೆಗಳನ್ನು ಸರಿಯಾಗಿ ದುರಸ್ತಿ ಮಾಡದೆ ಬಿದ್ದು ಹೋಗಿವೆ. ಇಂದು ಕೆಲವು ಐನ್ ಮನೆಗಳಿದ್ದರೂ ಅಲ್ಲಿ ವಾಸಮಾಡುವುದೇ ಇಲ್ಲದಂತಾಗಿದೆ. ಇದಕ್ಕೆ ಕಾರಣ ಈಗಿನ ನಾಗರೀಕತೆಯ ಪ್ರಭಾವ. ಮನೆಯ ಪಟ್ಟೆದಾರ ಜಮಾ ಬಂದಿ ಪುಸ್ತಕದಲ್ಲಿ ಮಾತ್ರ ಹೆಸರಿದೆಯೇ ಹೊರತು ಹಿಂದಿನ ಕಾಲದಲ್ಲಿ ಪಟ್ಟೆದಾರನಿಗೆ ಕೊಡುತ್ತಿದ್ದ ಗೌರವ, ಮರ್ಯಾದೆಗಳೆಲ್ಲಾ ಮಾಯವಾಗಿದೆ. ಹಿರಿಯರಿಗೆ ಕಿರಿಯರು ಕೊಡುವ ಗೌರವ ಕಡಿಮೆಯಾಗಿದೆ. ಮದುವೆ, ಮುಂಜಿಗಳಲ್ಲಿ ಮಾತ್ರ ಸೋದರ ಮಾವನನ್ನು ಕಾಣುವಂತೆ ತೋರಿಕೆಯ ಗೌರವ ಸಲ್ಲಿಸುತ್ತಾರೆ. ಮನೆಯ ಯಜಮಾನನನ್ನು ಕೇಳುವವರೇ ಇಲ್ಲದಾಗಿದೆ. ಗೌಡರ ಅವಿಭಕ್ತ ಕುಟುಂಬ ವ್ಯವಸ್ಥೆ ಛಿದ್ರ ಛಿದ್ರವಾಗಿ ಕುಟುಂಬದ ಒಂದು ಭಾಗದ ಸದಸ್ಯರು ಇನ್ನೊಂದು ಭಾಗದ ಸದಸ್ಯರೊಡನೆ ಸಂಬಂಧವನ್ನು ಕಡಿದುಕೊಂಡು ಎರಡು ಭಾಗಗಳ ಸದಸ್ಯರ ಪರಿಚಯವೇ ಇಲ್ಲದಂತಾಗಿದೆ.

ಹಿಂದಿನ ಕಾಲದಲ್ಲಿ ಅಗೆ, ನಾಟಿ, ಒಕ್ಕಲು ಒಟ್ಟುಗೂಡಿ ಮಾಡುತ್ತಿದ್ದ ಕ್ರಮ ತಪ್ಪಿ ಹೋಗಿ ಪ್ರತಿಯೊಂದು ಕೆಲಸವನ್ನೂ ತನ್ನ ಅನುಕೂಲ ರೀತಿಯಲ್ಲಿ ಮಾಡುತ್ತಿದ್ದಾನೆ. ಕೆಲವು ವಿಷಯಗಳಲ್ಲಿ ಅವಿಭಕ್ತ ಕುಟುಂಬಗಳ ಸದಸ್ಯರ ಆರ್ಥಿಕ ಚಟುವಟಿಕೆಗಳಿಗೆ ತೊಂದರೆಯಾಗಬಹುದು. ಆದರೆ ಕುಟುಂಬದ ಸದಸ್ಯರಲ್ಲಿ ಹಿಂದೆ ಇದ್ದ ಪ್ರೀತಿ ವಿಶ್ವಾಸ, ಒಗ್ಗಟ್ಟು ಮಾಯವಾಗಿದೆ. ಪ್ರತಿಯೊಬ್ಬ ಸದಸ್ಯನೂ ತಾನೇ ಯಜಮಾನನೆಂಬ ರೀತಿಯಲ್ಲಿ ವರ್ತಿಸುತ್ತಿದ್ದಾನೆ. ಹತ್ತು ಕುಟುಂಬ ಹದಿನೆಂಟು ಗೋತ್ರದ ಮಾತು ಬರೇ ಮದುವೆಗಳಲ್ಲಿ ಹೇಳುವ ಕಾಟಾಚಾರದ ಮಾತಾಗಿ ಉಳಿದಿದೆಯೇ ಹೊರತು, ಕಾಯಾ, ವಾಚಾ ಆಚರಿಸುವುದರಲ್ಲಿ ಉಳಿದಿಲ್ಲ. ಹಿಂದೆ ಹಿರಿಯರೆಲ್ಲಾ ಸೇರಿ ತೀರ್ಮಾನಿಸಿದುದಕ್ಕೆ ಕಿರಿಯ ಸದಸ್ಯರು ನ್ಯಾಯವಾಗಿದ್ದಲ್ಲಿ ಒಪ್ಪಿ ಸೌಹಾರ್ಧ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದರು. ಈಗ ಅದರ ಬದಲು ಕೋರ್ಟಿಗೆ ಹೋಗುತ್ತಾರೆ. ಸಣ್ಣ ಪುಟ್ಟ ತಪ್ಪುಗಳಿಗಾಗಿ ದ್ವೇಷ ಸಾಧಿಸುತ್ತಾರೆ. ಐನ್ ಮನೆಗಳನ್ನು ಕೇಳುವವರೇ ಇಲ್ಲವಾಗಿದೆ. ಅಲ್ಲಿ ಮನುಷ್ಯರ ಬದಲು ಇಲಿ ಹೆಗ್ಗಣಗಳು ವಾಸ ಮಾಡುವ ಪರಿಸ್ಥಿತಿ ಬಂದಿದೆ. ಇದಕ್ಕೆ ಈಗಿನ ನಾಗರೀಕತೆಯೇ ಕಾರಣವೇ ? ಇದನ್ನು ಸರಿಪಡಿಸಲು ಸಾಧ್ಯವಿಲ್ಲವೇ ? ಗೌಡ ಸಾಂಸ್ಕೃತಿಕ ಅಕಾಡಮಿಯವರು ಈ ಬಗ್ಗೆ ಚಿಂತಿಸಬೇಕಾಗಿದೆ ಎಂದು ಸಂಗಾತಿಯ ಸಲಹೆ. ●

ಅರೆಭಾಷಿಕರ ಹೆಮ್ಮೆಯ ಸುಪುತ್ರ ಶ್ರೀ ಕೊರಿಯಾರು ಅಪ್ಪಣ್ಣ ರವಿಕುಮಾರ್ (ಸತ್ಯ)ಗೆ "ಭಾರತ್ ಶ್ರೀ" ಮತ್ತು "ಭಾರತ್ ಗೌರವ್" ಪ್ರಶಸ್ತಿ

ನವದೆಹಲಿಯ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯು ಆಯ್ದ ಕ್ಷೇತ್ರಗಳಲ್ಲಿ ಅಭೂತ ಪೂರ್ವ ಸಾಧನೆಗೈದು ರಾಷ್ಟ್ರದ ಪ್ರಗತಿಯಲ್ಲಿ ತಮ್ಮ ಗಣನೀಯ ಕೊಡುಗೆ ನೀಡಿದ ಸಾಧಕರಿಗೆ ನೀಡಲಾಗುವ 'ಭಾರತ್ ಶ್ರೀ' ಮತ್ತು 'ಭಾರತ್ ಗೌರವ್' ಪ್ರಶಸ್ತಿಗಳನ್ನು ಈ ಬಾರಿ ಮೂಲತಃ ಕೊಡಗು ಜಿಲ್ಲೆಯ ವಿರಾಜಪೇಟೆಯ ಕೆದಮುಳ್ಳೂರಿನವರಾದ ಪ್ರಸಕ್ತ ಮಂಗಳೂರಿನಲ್ಲಿ ಉದ್ದಿಮೆ ನಡೆಸುತ್ತಿರುವ 'ಮೆ|| ಓಶಿಯನ್ ಮೆರೈನ್ ಸಪ್ಲೈಸ್' ಸಂಸ್ಥೆಯ ಮಾಲೀಕರಾದ ಶ್ರೀ ಕೊರಿಯಾರು ಅಪ್ಪಣ್ಣ ರವಿಕುಮಾರ್ ಇವರಿಗೆ ನೀಡಲಾಗಿದೆ. ಇತ್ತೀಚೆಗೆ ನವದೆಹಲಿಯಲ್ಲಿ ನಡೆದ ಸಮಾರಂಭದಲ್ಲಿ ಮಾಜಿ ಲೋಕಸಭಾ ಅಧ್ಯಕ್ಷ ಶ್ರೀ ಶಿವರಾಜ್ ಪಾಟೀಲ್‌ರವರು ಶ್ರೀ ರವಿಕುಮಾರ್‌ರವರಿಗೆ ಮೇಲಿನ ಪ್ರಶಸ್ತಿಗಳನ್ನು ಹಸ್ತಾಂತರಿಸಿದರು. ವರ್ಣರಂಜಿತ ಸಮಾರಂಭದಲ್ಲಿ ಕೇಂದ್ರ ಹಣಕಾಸು ಮಂತ್ರಿ ಶ್ರೀ ಯಶವಂತ್‌ಸಿನ್ಹಾ ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು.

ಶ್ರೀ ಕೊರಿಯಾರು ಅಪ್ಪಣ್ಣ ಹಾಗೂ ಮಣ್ಣಾಪುರ ಪೊನ್ನಮ್ಮ ದಂಪತಿಗಳ ಪುತ್ರರಾಗಿರುವ ಇವರು ಶ್ರೀ ಕೊರಿಯಾರು ಮುತ್ತಣ್ಣರವರ ಮೊಮ್ಮಗನಾಗಿರುತ್ತಾರೆ. ವಿರಾಜಪೇಟೆ ತಾಲ್ಲೂಕಿನ ಕೆದಮುಳ್ಳೂರಿನಲ್ಲಿ 1965ನೇ ಇಸವಿ ಜುಲೈ ತಿಂಗಳ 31ರಂದು ಜನಿಸಿದ ಇವರಿಗೆ ಇಬ್ಬರು ಅಕ್ಕಂದಿರು ಇಬ್ಬರು ತಂಗಿಯರು ಹಾಗೂ ಒಬ್ಬ ತಮ್ಮನನ್ನು ಹೊಂದಿದ್ದಾರೆ. ತಮ್ಮ ವಿದ್ಯಾಭ್ಯಾಸವನ್ನು ವಿರಾಜಪೇಟೆಯಲ್ಲೇ ಮುಗಿಸಿದ ಇವರ ಮತ್ತೊಂದು ಹೆಸರು ಸತ್ಯ. ತಮ್ಮ ಬಾಲ್ಯದಿಂದಲೇ ಬಹಳ ಕಷ್ಟಪಟ್ಟಿದ್ದ ಇವರು ತಮ್ಮ ಪೋಷಕರ ಆಶೀರ್ವಾದದಿಂದ ಬೆಳೆದವರು. ನಂತರ ಉದ್ಯೋಗಕ್ಕಾಗಿ ಮಂಗಳೂರಿಗೆ ಬಂದು ಶ್ರಮಿಸಿದ ಇವರು ನವಮಂಗಳೂರಿನಲ್ಲಿ ಖಾಸಗಿ ಸ್ಟೆವೆಡೋರ್‌ನಲ್ಲಿ ಉದ್ಯೋಗ ಗಿಟ್ಟಿಸಿಕೊಂಡರು. ಎರಡು ವರ್ಷ ಅಲ್ಲೇ ದುಡಿದು ಎಂ.ವಿ. ಅಕ್ರಿತಾಸ್ ಎಂಬ ಫೆರೋಜ್ ಶಿಪ್ಪಿಂಗ್ ಕಂಪೆನಿಯಲ್ಲಿ ಲಂಡನ್‌ಗೆ ಸೇರಿದ ಹಡಗಿನಲ್ಲಿ ಸೀಮೆನ್ ಆಗಿ ದುಡಿದು ನಂತರ ಎಂ. ವಿ. ನಾದಿಯಾಎಸ್ ಎಂಬ ಟಾಸ್ಕೋಪ್ ಶಿಪ್ಪಿಂಗ್ ಪೈರಸಸ್ ದೇಶಕ್ಕೆ ಸೇರಿದ ಹಡಗಿನಲ್ಲೂ ದುಡಿದರು. ತಮ್ಮ ದೀರ್ಘಕಾಲದ ಶಿಪ್ಪಿಂಗ್ ಸೇವೆಯಲ್ಲಿ ಇವರು ಪ್ರಪಂಚದ ಬಹುಪಾಲು ರಾಷ್ಟ್ರಗಳಲ್ಲಿ ಸುತ್ತಾಡಿ ತಮ್ಮ ಸೇವೆಯಲ್ಲಿ ಪರಿಣತಿಯನ್ನು ಸಾಧಿಸಿದ್ದಾರೆ. ಪ್ರಮುಖ ರಾಷ್ಟ್ರಗಳಾದ ಸೌತಾಫ್ರಿಕಾ, ವೆಸ್ಟಾಫ್ರಿಕಾ, ಕೀನ್ಯ, ಮೊಬಾಸಾ, ತಾಂಜಾನಿಯಾ, ಗಾನ, ನೈಜೀರಿಯಾ, ಫ್ರಾನ್ಸ್, ಸ್ಪೈನ್, ಗ್ರೀಸ್, ಜಿನೇವಾ, ರಷ್ಯಾ, ಜಪಾನ್, ಸಿಂಗಾಪೂರ್, ಇಂಡೋನೇಷ್ಯಾ, ಆಸ್ಟ್ರೇಲಿಯಾ, ಮಲೇಷಿಯಾ, ಐವರಿಕೋಸ್ಟ್, ಸೌತ್ ಅರೇಬಿಯಾ, ಈಜಿಪ್ಟ್, ಟರ್ಕಿ, ಮಡಗಾಸ್ಕರ್, ರೀಯಾನಿಯನ್, ಇಂಗ್ಲೆಂಡ್, ಜರ್ಮನಿ, ಹಾಲೆಂಡ್, ಇಟಲಿ ಡ್ರರಾಂಗ್‌ಸೌಕ್ ಅಮೇರಿಕ ಇನ್ನೂ ಅನೇಕ ದೇಶಗಳಿಗೆ ಭೇಟಿ ನೀಡಿದ ಇವರು ಗ್ರೀಕ್ ಮತ್ತು ಇನ್ನಿತರ ಭಾಷೆಗಳಲ್ಲಿ ಮಾತನಾಡಬಲ್ಲರು. ಮಂಗಳೂರಿಗೆ ಇವರು ಬಂದ ವೇಳೆಯಲ್ಲಿ ಶಿಪ್ಪಿಂಗ್ ಕ್ಷೇತ್ರದಲ್ಲಿ ತುಂಬಾ ಸ್ಪರ್ಧೆ ಇತ್ತು. ತಾವು ಪರವಾನಗಿ ಹೊಂದಲು ಮುಂದಾದಾಗ ಇದೇ ರಂಗದಲ್ಲಿದ್ದ ಕೆಲವರು ಇವರ ಮೇಲೆ ಕೆಂಡ ಕಾರತೊಡಗಿದರು. ಅಂತೂ ಕಟ್ಟ ಕಡೆಗೂ ಪರವಾನಗಿ ಗಿಟ್ಟಿಸಿಕೊಂಡ ಇವರು 1986ರಲ್ಲಿ ತಮ್ಮ ಸಂಸ್ಥೆ 'ಓಶಿಯನ್ ಮೆರೈನ್ ಸಪ್ಲೈಸ್'ನ್ನು ಮಂಗಳೂರಿನಲ್ಲಿ ಪ್ರಾರಂಭಿಸಿದರು. ತಮ್ಮ ತಂದೆ, ತಾಯಿಯರ, ಗುರುಹಿರಿಯರ ಹಾಗೂ ಕುಲಗುರು ವೆಂಕಟರಮಣನ ಅಭಯ ಹಸ್ತದಿಂದಲೂ ಈ ಹಂತ ತಲುಪಿದ್ದಾರೆ. ಈ ಹಂತ ತಲಪಲು ಯಾರಿಂದಲೂ ಸಹಕಾರ ಪಡೆಯದೆ ತಮ್ಮ ಸ್ವಪ್ರಯತ್ನದಿಂದ ಸಣ್ಣಮಟ್ಟದಲ್ಲಿ ಉದ್ದಿಮೆಯನ್ನು ಪ್ರಾರಂಭಿಸಿದ ಸಾಹಸಿಯಾಗಿದ್ದಾರೆ. ಮುಂದೆ ಶಿಪ್ಪಿಂಗ್ ಸೇವೆಯಲ್ಲಿ ದೇಶ ವಿದೇಶಗಳಿಗೆ ಆಹಾರ ಪೂರೈಕೆ, ಆಮದು ಮತ್ತು ರಫ್ತು, ಬಾಡೆಂಡ್ ಸ್ಟೋರ್‌ಗಳಾದ ವಿದೇಶಿ ಮಧ್ಯ, ಸಿಗರೇಟು, ಪಾನೀಯ ಇತ್ಯಾದಿಗಳ ಪೂರೈಕೆ ಮತ್ತು ಹಡಗು ದುರಸ್ಥಿ ಕಾರ್ಯಗಳು ಪ್ರಮುಖವಾಗಿವೆ ನವಮಂಗಳೂರು ಬಂದರಿನಲ್ಲಿ ಶಿಪ್‌ಚ್ಯಾಂಡ್ಲಿಂಗ್ ಕಾರ್ಯದಲ್ಲಿ ಸುಮಾರು ಶೇ. 70ರಷ್ಟು ಸೇವೆ ಇವರದ್ದಾಗಿದ್ದು ಪ್ರಥಮ ಸ್ಥಾನವನ್ನು ಗಳಿಸಿದ ಪ್ರಮುಖರಾಗಿದ್ದಾರೆ.

ನವ ಮಂಗಳೂರು ಬಂದರಿನಲ್ಲಿ 1996–97ರಲ್ಲಿ ಕಾಯಿದೆಯ ಮೇರೆಗೆ 'ಪ್ರಾಣ್‌ಬೂರಿ' ಎಂಬ ಥ್ಯಾಲೆಂಡ್ ದೇಶದ ಹಡಗು ಬಂಧನಕ್ಕೊಳಗಾದಾಗ ಹಡಗಿನ ಮಾಲೀಕ ತಲೆತಪ್ಪಿಸಿಕೊಂಡಿದ್ದನು. ಹಡಗಿನ 22 ಮಂದಿ ಸಿಬ್ಬಂದಿ ವರ್ಗದವರು ತಮಗೆ ಗತಿ ಇಲ್ಲದೆ, ಅನ್ನ ನೀರಿಲ್ಲದೆ, ದಿಕ್ಕು ತೋಚದೆ ಸಂಕಷ್ಟದಲ್ಲಿದ್ದ ಸಂದರ್ಭದಲ್ಲಿ ಮಾನವೀಯತೆ ತೋರಿ ಶ್ರೀ ರವಿಕುಮಾರ್ ಯಾವುದೇ ಫಲಾಪೇಕ್ಷೆಯನ್ನು ನಿರೀಕ್ಷಿಸದೆ ಸುಮಾರು 2ವರ್ಷಗಳ ಕಾಲ ಇವರಿಗೆ ಆಹಾರ ಮತ್ತು ಇನ್ನಿತರ ಅಗತ್ಯ ವಸ್ತುಗಳನ್ನು ಪೂರೈಸಿದ್ದಾರೆ. ಶ್ರೀಯುತರ ಸಾಧನೆಯನ್ನು ಇಂಗ್ಲಿಷ್

ಕನ್ನಡ ಹಾಗೂ ಮಲಯಾಳಂ ದೈನಿಕ ಪತ್ರಿಕೆಗಳು ಪ್ರಕಟಿಸಿವೆ. ದೇಶ ವಿದೇಶಗಳ ನಾನಾ ಕಡೆಗಳಲ್ಲಿ ಸಂಚರಿಸಿದ ಇವರು ಅಪಾರ ಅನುಭವವನ್ನು ಪಡೆದು ನಗರ ಹಾಗೂ ವಿದೇಶಗಳಲ್ಲಿ ಜನಪ್ರಿಯರಾಗಿದ್ದಾರೆ. ಧೀಮಂತ ಮತ್ತು ಉದಾರ ಮನಸ್ಸಿನವರಾದ ಇವರು ಕೆಲವು ಧಾರ್ಮಿಕ ಕ್ಷೇತ್ರಗಳಿಗೆ ತಮ್ಮ ಕೊಡುಗೆಯನ್ನು ನೀಡಿದ್ದಾರೆ.

ಶ್ರೀಯುತ ರವಿಕುಮಾರ್‌ರವರು ಈ ಮೇಲಿನ ಉದ್ಯಮವಲ್ಲದೆ ಹಡಗು ದುರಸ್ಥಿಗೊಳಿಸುವ ಮೆ॥ ಬ್ಲೂ ಓಶಿಯನ್ ಶಿಪ್ ಸಪ್ಲೈಸ್ ಅಂಡ್ ರಿಪೇರ್ಸ್ ಮತ್ತು ಮೆ॥ ಸನ್‌ಶೈನ್ ಸಪ್ಲೈಯಿಂಗ್ ಸಂಸ್ಥೆಗಳ ಪಾಲುದಾರರಾಗಿದ್ದಾರೆ. ಸತತ ಪ್ರಯತ್ನ ನಿರಂತರ ಶ್ರಮ ಹಾಗೂ ಕರ್ತವ್ಯ ಪ್ರಜ್ಞೆಯಿಂದ ಇವರು ಮಂಗಳೂರಿನಲ್ಲಿ ಹಡಗುಗಳಿಗೆ ಆಹಾರ ಮತ್ತು ಇನ್ನಿತರ ಹಡಗು ದುರಸ್ತಿ ಸಾಮಗ್ರಿಗಳನ್ನು ಪೂರೈಸುವಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಇವರ ಸಹೋದರ ಕೆ. ಎ. ಚಂದ್ರಶೇಖರ ಕೂಡ ಶಿಪ್ ಚ್ಯಾಂಡ್ಲಿಂಗ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಬೇಕೆಂಬ ಹಂಬಲ ಹೊತ್ತ ಇವರನ್ನು ಗ್ರೀಕ್ ರಾಷ್ಟ್ರದ ಹಡಗಿನಲ್ಲಿ ಅನುಭವ ಪಡೆಯಲು ಪ್ರೋತ್ಸಾಹಿಸಿ, ಎರಡು ವರ್ಷಗಳ ಅನುಭವದ ನಂತರ 1992ರಲ್ಲಿ ಪ್ರಾರಂಭವಾದ ಮೆ॥ ಬ್ಲೂ ಓಷಿಯನ್ ಶಿಪ್ ಅಂಡ್ ರಿಪೇರ್ಸ್ ಸಂಸ್ಥೆಯಲ್ಲಿ ಪಾಲುದಾರರು ಮತ್ತು ಓಶಿಯನ್ ಮೈರೈನ್ ಸಪ್ಲೈಸ್ ಸಂಸ್ಥೆಯಲ್ಲಿ ದೈನಂದಿನ ಚಟುವಟಿಕೆಗಳಿಗೆ ತಮ್ಮ ಸಹಕಾರವನ್ನು ನೀಡುತ್ತಿದ್ದಾರೆ

ಅಲ್ಲದೆ ಈ ಕೆಳಗೆ ಕಾಣಿಸಿದ ದೇಶ ವಿದೇಶಗಳ ಕಂಪನಿಗಳು ಇವರ ಜೊತೆ ನಿಕಟ ಸಂಬಂಧವಿರಿಸಿ ವ್ಯವಹರಿಸುತ್ತಿದ್ದಾರೆ. ದಿ. ಶಿಪ್ಪಿಂಗ್ ಕಾರ್ಪೊರೇಶನ್ ಆಫ್ ಇಂಡಿಯಾ ಲಿಮಿಟೆಡ್, ಮಿಡ್‌ವೇ ಶಿಪ್ಪಿಂಗ್ ಮತ್ತು ಟ್ರೇಡಿಂಗ್ ಕಂಪೆನಿ, ಗ್ರೀಸ್, ಮರಾನ ಲೂಜಾನ್ ಶಿಪ್ಪಿಂಗ್ ಕಂಪೆನಿ ಫಿಲಿಪೈನ್ಸ್, ಮೂಲ್ಡಾಟ್ಸ್ ಟ್ರಾನ್ಸ್‌ಪೋರ್ಟ್ ಸರ್ವಿಸ್ ಪ್ರೈ ಲಿಮಿಟೆಡ್ ಸಿಂಗಾಪೂರ್, ಬ್ಲೂ ಓಶಿಯನ್‌ಶಿಪ್ ಮ್ಯಾನೇಜ್‌ಮೆಂಟ್ ಲಿಮಿಟೆಡ್, ಲಾಸ್ ಏಂಜಲಿಸ್, ಹ್ಯಾಂ ಡ್ರೈಡ್ಜಿಂಗ್ ಮತ್ತು ಮೆರೀನೆ ಕಾಂಟ್ರ್ಯಾಕ್ಟರ್, ಹಾಲೆಂಡ್, ಆಲ್ಯೂನೇಟೆಡ್ ಮ್ಯಾರಿಟೈಂ ಪ್ರೈವೇಟ್ ಲಿಮಿಟೆಡ್, ಸಿಂಗಾಪೂರ್ ಅಡ್ಮಿರಲ್ ಶಿಪ್ಪಿಂಗ್ ಸ್ಕ್ವಾಡ್ರನ್, ಮಲೇಶಿಯಾ, ಹ್ಯಾರಿಸನ್ ಲೈನ್ ಇಂಗ್ಲೆಂಡ್, ಮ್ಯಾರೆಕ್ಸ್, ಸಿಂಗಾಪೂರ್, ಏಸೆಸ್ ಶಿಪ್ಪಿಂಗ್ ಲಿಮಿಟೆಡ್ ಗ್ರೀಸ್ ಹಾಗೂ ಆಶಾಪೂರ ಶಿಪ್ ಮ್ಯಾನೇಜ್‌ಮೆಂಟ್ ಪ್ರೈವೇಟ್ ಲಿಮಿಟೆಡ್, ಮುಂಬಯಿ ಮತ್ತು ವರುಣ್ ಶಿಪ್ಪಿಂಗ್ ಕಂಪೆನಿ ಲಿಮಿಟೆಡ್, ಮುಂಬಯಿ.

ಶ್ರೀ ರವಿಕುಮಾರ್‌ರವರು ಶೀಘ್ರದಲ್ಲಿಯೇ ಬಿಡುಗಡೆಗೊಳ್ಳಲಿರುವ 'ಓಂಸ' ಪ್ರೊಡಕ್ಷನ್‌ರವರ ಬಿ. ಆರ್. ಕೇಶವ್ ನಿರ್ದೇಶನದ 'ಲವ್ ಇನ್ ನೇಪಾಳ್' ಕನ್ನಡ ಚಲನಚಿತ್ರದಲ್ಲಿ ಪ್ರಧಾನ ಪಾತ್ರದಲ್ಲಿ ಅಭಿನಯಿಸುತ್ತಿದ್ದು ಕನ್ನಡ ಬೆಳ್ಳಿ ತೆರೆಗೆ ಪರಿಚಯಿಸಿಕೊಳ್ಳಲಿದ್ದಾರೆ.

ಇವರ ಅಗಾಧ ಕಾರ್ಯ ಶೈಲಿಯು ಶಿಪ್ಪಿಂಗ್ ಕ್ಷೇತ್ರದಲ್ಲಿಯೂ ಮತ್ತು ಚಲನಚಿತ್ರ ಕ್ಷೇತ್ರದಲ್ಲಿಯೂ ಸದಾ ತಮ್ಮನ್ನು ತೊಡಗಿಸಿಕೊಂಡು ನಿಷ್ಠೆ, ಪ್ರಾಮಾಣಿಕತೆ, ಹಠ, ಸಾಧನೆ, ಶ್ರಮವಹಿಸಿ ದಕ್ಕಿಸಿಕೊಳ್ಳುವ ಕಟ್ಟುನಿಟ್ಟಿನ ಶಿಸ್ತಿನ ಶಿಪಾಯಿ ರವಿಕುಮಾರ್ ಗೌಡ ಜನಾಂಗದ ಕೀರ್ತಿಯನ್ನು ಈ ದಿಶೆಯಲ್ಲಿ ಉತ್ತುಂಗಕ್ಕೇರಿಸಿದ, ಅರೆಭಾಷಿಕರ ಏಕಮೇವ ಯುವ ಪ್ರತಿಭೆಯು ಭೀಷ್ಮರೆನಿಸಿದ, ಶ್ರೀ ಕೊರಿಯಾರು ಅಪ್ಪಣ್ಣ ರವಿಕುಮಾರ್ ಇವರಿಗೆ ಕುಲಗುರು ಶ್ರೀ ವೆಂಕಟರಮಣ ಸ್ವಾಮಿಯು ಸಂಪೂರ್ಣ ಆರೋಗ್ಯ ಭಾಗ್ಯವನ್ನು ಕರುಣಿಸಲಿ. ಇವರ ಆಶೋತ್ತರಗಳೆಲ್ಲವೂ ಈಡೇರಲಿ ಎಂದು ಅರೆಭಾಷಿಕ ಜನಾಂಗದ ಪರವಾಗಿ ಕೊಡಗು ಸಂಗಾತಿ ಶುಭವನ್ನು ಹಾರೈಸುತ್ತದೆ.

○ ಪಟ್ಟಡ ಪ್ರಭಾಕರ

ಮುಂಜಾನೆಯ ಮಂಜು

ಮುಂಜಾನೆಯ ಮಂಜಿನಲಿ
ಪಸರಿಸಿತ್ತು ಎಲೆಗಳ ಮೇಲೆ
ಮೂಡುತಿತ್ತು ಮುತ್ತುಗಳ ಮಾಲೆ
ನೋಡುತ್ತಾ ಮೈಮರೆತು ನಿಂತೆ ನಾನಿಲ್ಲಿ !

ಇಣುಕಿತ್ತು ರವಿಯ ಹೊಂಗಿರಣ
ಎಚ್ಚೆದಿತ್ತು ಇನ್ನೂ ಆ ಕುಡಿ
ಜೀವ ಪಡೆಯಿತು ಆ ಮೊಗ್ಗು
ಅರಳಿತು ನಗೆ ಚೆಲ್ಲುವ ಆ ಹೂವು...
ಸಾರ್ಥಕವಾಯ್ತು ಅದರ ಬಾಗ್ಗೆ

○ಅಮೆಮನೆ ಗೀತಾದೇವಪ್ಪ, ಮಡಿಕೇರಿ.

ಸೂಕ್ತಿ

ಭೇದೋಪಾಯದಿಂದ ಎಲ್ಲಿ ತನಗೆ ಬೇಕಾದವರು ವಶರಾಗುತ್ತಾರೋ ಅಲ್ಲಿ ಅದನ್ನು ಪ್ರಯೋಗಿಸಬೇಕು.

—ಪಂಚತಂತ್ರ

ದಿ॥ ಮುದ್ದಪ್ಪನವರ ಸುಪುತ್ರ ಐವರ್ನಾಡಿನ 'ಅಣ್ಣ'–ಎನ್. ಎಂ. ಬಾಲಕೃಷ್ಣ

[ಹಿಂದಿನ ಸಂಚಿಕೆಯಿಂದ]

ಒಬ್ಬ ಸಹೋದರ ಹಾಗೂ 8 ಜನ ಸೋದರಿಯನ್ನು
ಹೊಂದಿದ ಎನ್ನೆಂ ಅವರ ವಿದ್ಯಾಭ್ಯಾಸವು ಕೊಡಗು ಹಾ ಗೂ
ಮಂಗಳೂರಿನ ಸರಕಾರಿ ಕಾಲೇಜಿನಲ್ಲಿ ಆಯಿತು. ಬೆಳ್ಯಪ್ಪ
ಗೌಡರಿಗೆ ಗಂಡು ಸಂತತಿ ಇಲ್ಲದುದರಿಂದ ಐವರ್ನಾಡಿನ ಅವರ
ಆಸ್ತಿಯನ್ನು ನೋಡಿಕೊಳ್ಳುವ ಸಲುವಾಗಿ ಬಾಲಕೃಷ್ಣರು
1948ರಲ್ಲಿ ಕೊಡಗನ್ನು ತೊರೆದು ಐವರ್ನಾಡಿನಲ್ಲಿ ಬಂದು
ನೆಲೆಸಬೇಕಾಯಿತು. ಅಂದಿನಿಂದ ಐವರ್ನಾಡಿನಲ್ಲಿ ವರ್ಣರಂಜಿತ
ವ್ಯಕ್ತಿತ್ವವೊಂದರ ಅರ್ಥಪೂರ್ಣ ಬದುಕು ಆರಂಭವಾಯಿತು.
1952ರಲ್ಲಿ ಶಿವಮೊಗ್ಗದ ಅಗರ್ಭ ಶ್ರೀಮಂತ ಸಾಹುಕಾರ್
ಹೆಚ್. ಎಸ್. ಮಂಜಪ್ಪನವರ ಮಗಳು ಮೀರಾರನ್ನು
ಬಾಲಕೃಷ್ಣರು ವಿವಾಹವಾದರು. ಅವರಿಗೆ ಒಬ್ಬ ಪುತ್ರ, ಇಬ್ಬರು
ಪುತ್ರಿಯರು.

ಬಾಲಕೃಷ್ಣರದು ಜನಾಕರ್ಷಕ ವ್ಯಕ್ತಿತ್ವ. ಒಂದು ಅಂಗ
ಕ್ಷೇಪದಿಂದಲೇ ಎಂಥವರನ್ನೂ ತನ್ನ ಬಳಿಗೆ ಸೆಳೆದುಕೊಳ್ಳಬಲ್ಲ
ಚುಂಬಕ ಶಕ್ತಿಯುಳ್ಳವರು ಅವರು. ತೀರಾ ಹಿಂದುಳಿದ ಪ್ರದೇಶ
ವಾದ ಐವರ್ನಾಡಿಗೆ ಹೊಸ ರೂಪ, ಹೊಸ ವ್ಯಕ್ತಿತ್ವ ಹಾಗೂ
ಆಧುನಿಕತೆಯ ಮೆರುಗನ್ನು ನೀಡಿದವರು ಅವರು. ಇಲ್ಲಿನ ಜನ
ರನ್ನು ಒಟ್ಟು ಸೇರಿಸಿ ಏಕಾಭಿಪ್ರಾಯವನ್ನು ಕ್ಷಣ ಮಾತ್ರದಲ್ಲೇ
ಮೂಡಿಸಬಲ್ಲ ಶಕ್ತಿಯುಳ್ಳವರು ಅವರು. ಆದ್ದರಿಂದಲೇ 'ಅಣ್ಣ
ಹೇಳಿದರೆ ಆಯಿತು, ಬೇರೆ ಮಾತಿಲ್ಲ. ನಾವೆಲ್ಲ ಅವರು ಹೇಳಿದ
ಹಾಗೆ ಎನ್ನುವ ಮಾತು ಐವರ್ನಾಡಿನ ಉದ್ದಗಲಕ್ಕೂ ಕೇಳಿ
ಬರುವಂತಾಯಿತು. ಇದೆಲ್ಲಾ ಅವರಿಗೆ ಸಾಧ್ಯವಾದದ್ದು ದಂಡ
ಶಕ್ತಿಯಿಂದಲ್ಲ, ಅವ್ಯಾಜ ಪ್ರೇಮ ಹಾಗೂ ಕಷ್ಟಕ್ಕೆ ಸಿಲುಕಿದವ
ರಿಗೆ ಆಪದ್ಬಾಂಧವನಾಗಿ ಸಹಾಯ ಹಸ್ತ ನೀಡುವ ಅವರ ಅನನ್ಯ
ಗುಣ ವಿಶೇಷದಿಂದ. ಅವರ ನೀತಿ ತಾನು ಉರಿದು ಸುತ್ತಣ
ಜನಕ್ಕೆ ಹಿತಕರ ಬೆಳಕು ನೀಡುವ ಹಣತೆಯ ರೀತಿ. ಈ ಗುಣ
ದಿಂದಾಗಿಯೇ ಅವರು ಜಿಲ್ಲಾ ಬೋರ್ಡಿಗೆ ಸುಳ್ಯ ಕ್ಷೇತ್ರದಿಂದ
ನಡೆದ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಅವಿರೋಧವಾಗಿ
ಆಯ್ಕೆಯಾದರು. ಈ ಗುಣದಿಂದಲೇ ಅವರು ಸುಳ್ಯ ಭೂ
ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರಾಗಿ ಆಯ್ಕೆಯಾದರು. ಅರವ
ತ್ತರ ದಶಕದಲ್ಲಿ ಅವರು ಕಾಂಗ್ರೆಸ್ ಪ್ರಾಬಲ್ಯದ ಸುಳ್ಯ ತಾಲ್ಲೂಕಿ
ನಲ್ಲಿ ಅದರ ವಿರುದ್ಧ ಸ್ವತಂತ್ರ ಪಕ್ಷದ ನೇತೃತ್ವ ವಹಿಸಿದರಲ್ಲದೆ
ತಾಲ್ಲೂಕು ಬೋರ್ಡಿಗೆ ನಡೆದ ಚುನಾವಣೆಯಲ್ಲಿ ತಮ್ಮ ಪ್ರಭಾವಿ
ವ್ಯಕ್ತಿತ್ವದಿಂದಾಗಿಯೇ ಪ್ರ ಬ ಲ ಕಾಂಗ್ರೆಸ್ಸನ್ನು ಸೋಲಿಸಿ
ಆಯ್ಕೆಯೂ ಆದರು.

ಊರವರ ಮೇಲೆ ಅವರಿಗಿದ್ದ ಸತ್ಪ್ರಭಾವಕ್ಕೆ ಸಾಕ್ಷಿಯಾಗಿ
ಒಂದು ಘಟನೆಯನ್ನಂತೂ ಇಲ್ಲಿ ಎತ್ತಿ ಹೇಳಲೇಬೇಕು. ಚುನಾ
ವಣೆಯೊಂದರಲ್ಲಿ ಊರಿಗೆ ಸಂಬಂಧಿಸಿದ ಮುಖ್ಯ ಕಾರಣಗಳಿಗಾಗಿ
ಚುನಾವಣೆಯನ್ನು ಬಹಿಷ್ಕರಿಸುವ ನಿರ್ಧಾರವನ್ನು ಎನ್ನೆಂ
ಅವರು ಊರವರ ಮನ ಒಲಿಸಿಯೇ ಕೈಗೊಂಡರು. ಮತದಾನ
ದಿನದಂದು ಸುಮಾರು ಎರಡು ಸಾವಿರದಷ್ಟು ಮತದಾರರಿರುವ
ಇಲ್ಲಿನ ಎರಡು ಮತಕಟ್ಟೆಗಳಲ್ಲಿ ಒಟ್ಟಾಗಿ ಕೇವಲ 30 ಜನ
ಮಾತ್ರ ಮತದಾನ ಮಾಡಿದ್ದರು. ಈ ಅಭೂತಪೂರ್ವ ಪ್ರತಿ
ಭಟನೆ ಸಾಧ್ಯವಾದದ್ದು ಇಂದು ಅನೇಕ ಕಡೆಗಳಲ್ಲಿ ಆಗುವ
ರೀತಿಯ ಯಾವುದೇ ಗೂಂಡಾಗಿರಿ ಅಥವಾ ವಂಚನೆಯ ಕ್ರಮ
ಗಳಿಂದ ಅಲ್ಲ. ಬದಲಾಗಿ ಕೇವಲ ನಮ್ಮ 'ಅಣ್ಣ'ನ ಮಾತು
ಹಾಗೂ ಜನರಿಗೆ ಅವರ ಮೇಲೆ ಇರುವ ಪ್ರೀತಿ ಹಾಗೂ ವಿಶ್ವಾಸ
ದಿಂದ. 'ಅಣ್ಣ'ನ ನಿರ್ಧಾರವೇ ಐವರ್ನಾಡಿನ ನಿರ್ಧಾರ.
ಹಾಗೆಂದು ತಮ್ಮ ಈ ಶಕ್ತಿಯನ್ನು ಎನ್ನೆಂ ಎಂದೂ ದುರುಪ
ಯೋಗ ಪಡಿಸಿಕೊಂಡವರಲ್ಲ, ಜನರ ಮೇಲೆ ತಮ್ಮ ಅಭಿಪ್ರಾಯ
ವನ್ನು ಹೇರಿ, ದಬ್ಬಾಳಿಕೆ ನಡೆಸಿದವರಲ್ಲ. ಆದ್ದರಿಂದಲೇ ತಮ್ಮ
ಕಷ್ಟದ ದಿನಗಳಲ್ಲೂ ಎನ್ನೆಂ ಅವರು ಐವರ್ನಾಡಿನ 'ಅಣ್ಣ'
ನಾಗಿಯೇ ಉಳಿದರು : 'ಅಣ್ಣ'ನಾಗಿಯೇ ಆಳಿದರು.

ಎನ್ನೆಂ ಊರಿನ ಎಲ್ಲಾ ಬಗೆಯ ಚಟುವಟಿಕೆಗಳ ಕೇಂದ್ರ
ವಾಗಿದ್ದರು ಅದು ಊರಿನ ಜಾತ್ರೆಯಿರಬಹುದು, ಶಾಲೆಗಳ
ವಾರ್ಷಿಕೋತ್ಸವ ಇರಬಹುದು, ಸರಕಾರದ ಮೂಲಕವೋ,
ಇತರ ಸಾರ್ವಜನಿಕರ ಮೂಲಕವೋ ಊರಿನಲ್ಲಿ ಏರ್ಪಡುವ
ಯಾವುದೇ ಸಭೆ ಸಮಾರಂಭಗಳಿರಬಹುದು. ಅಲ್ಲೆಲ್ಲ ಚುರು
ಕಾಗಿ ಓಡಾಡುತ್ತಾ, ಎಲ್ಲರೊಂದಿಗೆ ಚಟಪಟನೆ ಮಾತಾಡುತ್ತ'
ನಿರ್ದೇಶನ ನೀಡುತ್ತಾ ಒಟ್ಟು ಕಾರ್ಯಕ್ರಮ ಯಶಸ್ವಿಯಾಗು
ವಂತೆ ನೋಡಿಕೊಳ್ಳುತ್ತಿದ್ದ ಎನ್ನೆಂ ಅವರನ್ನು ನಾವು ಕಾಣ
ಬಹುದಿತ್ತು. ಐವರ್ನಾಡಿನಲ್ಲಿ ಪ್ರತಿವರ್ಷ ನಡೆಯುತ್ತಿದ್ದ
ಊರಿನ ಎಲ್ಲಾ ಶಾಲೆಗಳ ಸಂಯುಕ್ತ ವಾರ್ಷಿಕೋತ್ಸವಕ್ಕೆ
ಮೈಸೂರು–ಬೆಂಗಳೂರುಗಳಿಂದ ಪ್ರಸಿದ್ಧ ವಾಗ್ಮಿಗಳನ್ನು ಅತಿಥಿ
ಗಳನ್ನಾಗಿ ಬರಮಾಡಿಕೊಳ್ಳುತ್ತಿದ್ದರು. ಹಾಗೆ ಬಂದವರ ಎಲ್ಲ
ವ್ಯವಸ್ಥೆ ಎನ್ನೆಂ ಅವರದೇ. ಹಾಗೆ ಅತಿಥಿಗಳಾಗಿ ಬಂದವರಲ್ಲಿ
ಬೆಂಗಳೂರಿನ ಪ್ರಸಿದ್ಧ ವಕೀಲರಾದ ಎಂ. ಆರ್. ಜನಾರ್ಧನ,
ಎಂ. ಜಿ. ನರಸಿಂಹಸ್ವಾಮಿ, ತಮ್ಮ ಅಸದೃಶ ಮಾತಿನ ಮೋಡಿ
ಯಿಂದ, ಸ್ನೇಹಪೂರ್ಣ ನಡವಳಿಕೆಯಿಂದ ಇನ್ನೂ ನೆನಪಿನಂಗಳ
ದಲ್ಲಿ ಜೀವಂತವಾಗಿ ಉಳಿದೇ ಇದ್ದಾರೆ.

ಎನ್ನೆಂ ಕಲಾರಸಿಕರಾಗಿದ್ದರು, ಕಲಾ ಪೋಷಕರಾಗಿದ್ದರು. ನಾವು ಗೆಳೆಯರು ಕೆಲವರು ಪ್ರತಿ ವರ್ಷ ಶಾಲಾ ವಾರ್ಷಿಕೋತ್ಸವದಂದು ನಾಟಕಗಳನ್ನಾಡುತ್ತಿದ್ದೆವು. ಆದರ ರಿಹರ್ಸಲ್ ವೇಳೆ ಹಾಗೂ ಪೂರ್ವಸಿದ್ಧತಾ ಸಮಯದಲ್ಲಿ ಎನ್ನೆಂ ಸ್ವತಹ ಹಾಜರಿದ್ದು ನಮಗೆ ಸಲಹೆ ಸೂಚನೆಗಳನ್ನು ನೀಡುತ್ತಿದ್ದರು. ತಾವು ನೋಡಿದ ಕೇಳಿದ ನಾಟಕ ಪ್ರದರ್ಶನಗಳ ವಿಚಾರಗಳನ್ನು, ಅನುಭವಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು. ನಮಗೆ ಯಾವುದೇ ತೊಂದರೆ ಅಥವಾ ಕೊರತೆ ಬಾರದಂತೆ ನೋಡಿಕೊಳ್ಳುತ್ತಿದ್ದರು.

ಎನ್ನೆಂ ಅವರು ಕೊಡುಗೈ ದಾನಿಯಾಗಿದ್ದರು. ಐವರ್ನಾಡಿನ ಯಾವುದೇ ಅಭಿವೃದ್ಧಿ ಕಾರ್ಯದಲ್ಲಿ ಅವರದು ಸಿಂಹಪಾಲು. ಕೇಳುಗರ ನಿರೀಕ್ಷೆಗಿಂತ ಹೆಚ್ಚೇ ಸಹಾಯ ನೀಡುತ್ತಿದ್ದರು. ಒಂದು ರೀತಿಯಲ್ಲಿ ಅವರದು ರಾಜಮರ್ಜಿ. ಖರ್ಚಿನ ಪ್ರಶ್ನೆ ಅವರನ್ನೆಂದೂ ಬಾಧಿಸಿರಲಿಲ್ಲ. ಆ ಕಾರಣದಿಂದಲೋ ಏನೋ ಅವರನ್ನು ಹೊಂದಿಕೊಂಡಿದ್ದವರೆಲ್ಲಾ ಆರ್ಥಿಕವಾಗಿ ಗಟ್ಟಿಯಾಗುತ್ತಾ ಹೋದರು ! ಅವರು ಮಾತ್ರ ಆರ್ಥಿಕವಾಗಿ ಸೋಲಿನ ಹಾದಿಯಲ್ಲಿ ಮುನ್ನಡೆಯುತ್ತಾ ಹೋದರು. ಇದರಿಂದಾಗಿ ಅವರು ಮಾನಸಿಕವಾಗಿಯೂ ಕುಂದಿಹೋದರು ಜೊತೆಗೆ ಕೆಲವು ವೈಯಕ್ತಿಕ ಸಮಸ್ಯೆಗಳೂ ಬೃಹದಾಕಾರ ತಾಳಿ ಅವರನ್ನು ಹಿಂಸಿಸತೊಡಗಿದವು. ಇವೆಲ್ಲವುಗಳಿಂದ ಅವರು ತಮ್ಮ ಕೊನೆಗಾಲದಲ್ಲಿ ತೀರಾ ಕಂಗಾಲಾದರು. ತನ್ನ ಗೋರಿ ಮೇಲೆ **ಬಾಲಕೃಷ್ಣ ಎನ್ನುವನೊಬ್ಬ ಇದ್ದ ಬಡವರಿಗೆ ಸಹಾಯ ಮಾಡಿ ಕೊನೆಗೆ ತಾನು ಬಡವನಾಗಿ ಸತ್ತ** ಎಂದು ಬರೆದಿಡಬೇಕು ಎಂದೊಮ್ಮೆ ಹೇಳಿದ್ದರು.

ಅವರ ಮರಣಕ್ಕಿಂತ ಕೊಂಚ ಮೊದಲು ಐವರ್ನಾಡಿನಲ್ಲಿ ಅಲ್ಲಿನ ಶಾಲಾ ವಾರ್ಷಿಕೋತ್ಸವ ಸಂದರ್ಭದಲ್ಲಿ ನಾನು ಅವರನ್ನು ಭೇಟಿಯಾಗಿದ್ದೆ. ಮಾತುಕತೆಯ ನಡುವೆ ಅವರು ಹೇಳಿದ ಒಂದು ಮಾತು ನನಗೆ ಈಗಲೂ ನೆನಪಿದೆ. ನಾಟಕದ ಬಗ್ಗೆ ಮಾತನಾಡುತ್ತಾ ಅವರು ಹೇಳಿದ್ದರು. **ನನ್ನ ನಾಟಕ ಮುಗಿಯಿತು ಸುಬ್ರಾಯರೇ, ಇನ್ನೆಲ್ಲ ನಿಮ್ಮದು. ನೀವು ಮುಂದುವರಿದರೆ ನಾನು ನಿಮ್ಮ ಜತೆ ಇದ್ದಂತೆಯೇ.**

ಹೌದು. ಅವರ ನಾಟಕ ಮುಗಿಯುತ್ತಾ ಬಂದಿತ್ತು. ಆದರೆ ಅವರೆಂದಿಗೂ ಸೋತರೂ ಸೋಲದ-ಧೀರೋದಾತ್ತ ನಾಯಕರೇ ಆಗಿದ್ದರು. ಶೇಕ್ಸ್‌ಪಿಯರ್ ನಾಟಕಗಳ ದುರಂತ ನಾಯಕನನ್ನು ಅವರು ನೆನಪಿಗೆ ತರುತ್ತಿದ್ದರು. ಅವರು ಎಂದೂ ಯಾವ ಸಂದರ್ಭದಲ್ಲೂ ಹೇಡಿಯಂತೆ, ಕ್ಷುಲ್ಲಕ ವ್ಯಕ್ತಿಯಂತೆ ವರ್ತಿಸಿದವರಲ್ಲ. ಧೀರೋದಾತ್ತವಾಗಿ ಬಾಳಿದರು. ಧೀರೋದಾತ್ತ ರೀತಿಯಲ್ಲೇ ಸಾವನ್ನಪ್ಪಿದರು. 13-5-1973ರಂದು ಐವರ್ನಾಡಿನ ಅಣ್ಣ, ಐವರ್ನಾಡಿನ ಹೊಳೆಯುವ ಸೂರ್ಯ ಅಸ್ತಂಗತನಾದ. ಅವರೊಂದಿಗೆ ಐವರ್ನಾಡಿನ ಅಂತಃಶಕ್ತಿಯೂ ಅಷ್ಟರಮಟ್ಟಿಗೆ ನಷ್ಟವಾಗಿ ಹೋಯಿತು. ಐವರ್ನಾಡಿಗೆ ಒಂದು ಹೆಸರು, ಒಂದು ಸ್ಥಾನವನ್ನು ತಂದುಕೊಟ್ಟ ವರ್ಣಮಯ ಬದುಕೊಂದು ಹೀಗೆ ಮರೆಯಾಗಿ ಹೋಯಿತು.

ಅಂತಹ ಉಜ್ವಲ ವ್ಯಕ್ತಿತ್ವದ, ಸೋಲಿನಲ್ಲೂ ನಗುವ, ಸಾವನ್ನೂ ಧೈರ್ಯದಿಂದ ಎದುರಿಸಿದ ಹಿರಿಯ ಚೇತನವನ್ನು ಇನ್ನೆಂದೂ ನಾವು ಕಾಣಲು ಸಾಧ್ಯವಿಲ್ಲ. ಸಿಂಹ ಸಿಂಹವೇ–ಅದು ಮರಿಯಾದರೂ ಸಿಂಹವೇ ಅಲ್ಲವೇ ?

ಈಗ ಎನ್ನೆಂ ಇಲ್ಲ. ಆದರೆ ಅವರ ನೆನಪು ಮಾತ್ರ ಅಚ್ಚಳಿಯದೆ ಉಳಿದಿರುತ್ತದೆ. ಉಳಿಯುವ ಆ ನೆನಪು ಅವರ ಮೇರು ವ್ಯಕ್ತಿತ್ವದ ಪ್ರತೀಕವೂ ಆಗುತ್ತದೆ. ○

—ಲೇಖಕ : ಸುಬ್ರಾಯ ಚೊಕ್ಕಾಡಿ

[ಮುಂದುವರೆದಿದೆ]

ಮರಗೋಡುವಿನಲ್ಲಿ ಕೈಲ್‌ಪೊಳ್ದ್ ಆಚರಣೆ


ದಿನಾಂಕ 3–9–98ರಂದು ವಿವೇಕಾನಂದ ಯುವಕ ಸಂಘದ ವತಿಯಿಂದ ಮರಗೋಡು ಪ್ರಾಥಮಿಕ ಶಾಲಾ ಮೈದಾನದಲ್ಲಿ ಗ್ರಾಮಾಂತರ ಆಟೋಟಗಳ ಸ್ಪರ್ಧೆ ನಡೆಯಿತು.

ಆಟೋಟಗಳ ಉದ್ಘಾಟನೆಯನ್ನು ಕೆ. ಪಿ. ಜಯನಂದ ಮಾಡಿದರು. ಮುಖ್ಯ ಅತಿಥಿಗಳಾಗಿ ಶ್ರೀ ಬಿ. ಟಿ. ಗಣಪತಿ ಮತ್ತು ಎಂ. ಎ. ಸರೋಜಿನಿಯವರು ದಯಮಾಡಿದ್ದರು. ಆಟೋಟಗಳ ಸ್ಪರ್ಧೆಯಲ್ಲಿ ಮಕ್ಕಳಿಂದ ಹಿಡಿದು ಹಿರಿಯರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಸ್ಪರ್ಧಾ ಕಾರ್ಯಕ್ರಮದಲ್ಲಿ ಒಟ್ಟು 31 ಸ್ಪರ್ಧೆಗಳನ್ನು ಇಡಲಾಗಿತ್ತು. ವಿಶೇಷವೆಂದರೆ ಪುರುಷ ಹಾಗೂ ಮಹಿಳೆಯರ ಹಗ್ಗಜಗ್ಗಾಟ ಪ್ರೇಕ್ಷಕರ ಮನಸೆಳೆದವು. ಸಮಾರೋಪ ಸಮಾರಂಭದಲ್ಲಿ ಅಧ್ಯಕ್ಷತೆಯನ್ನು ಶ್ರೀ ಐನಮಂಡ ನಾಣಯ್ಯ, ಮುಖ್ಯ ಅತಿಥಿಗಳಾಗಿ ಶ್ರೀ ಕೆ. ಕೆ. ಬಸಪ್ಪರವರು ಆಗಮಿಸಿದ್ದರು. ಇನ್ನೊಂದು ವಿಶೇಷವೆಂದರೆ ಈ ವರ್ಷದ ರಾಜ್ಯ ಪ್ರಶಸ್ತಿ ವಿಜೇತ ಮದೆ–ಮಹೇಶ್ವರ ಕಾಲೇಜಿನ ಮುಖ್ಯೋಪಾಧ್ಯಾಯರಾದ ಶ್ರೀ ಮಂದಣ್ಣನವರು ಆಗಮಿಸಿ ವಿಜೇತರಿಗೆ ಬಹುಮಾನ ವಿತರಿಸಿದರು ಮತ್ತು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲಾ ಕ್ರೀಡಾಪಟುಗಳಿಗೆ ಶುಭ ಹಾರೈಸಿದಲ್ಲದೆ ಹೆಚ್ಚಿನ ಮೆರಗನ್ನು ನೀಡಿತು.

ಕೊನೆಯದಾಗಿ ವಿವೇಕಾನಂದ ಸಂಘದ ಅಧ್ಯಕ್ಷರಾದ ಎಂ. ಕೆ. ವೆಂಕಟೇಶ್‌ರವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

—ಪರ್ಚನ ಪ್ರದೀಪ, ಮರಗೋಡು.

ಸಂಗಾತಿ ಪದಬಂಧ-7



ಎಡದಿಂದ ಬಲಕ್ಕೆ

1 ಹತ್ತಿರದಲ್ಲಿರುವ–4
3 ಕಾವೇರಿ, ಕನ್ನಿಕೆ ಸಂಗಮದ ಬಳಿ ಇರುವ ದೇವರು-4
5 ಮನೆ, ಗೃಹ, ವಸತಿ–3
6 ಹುಬ್ಬಿನ ಮೇಲ್ಭಾಗದ ಮುಖದ ಭಾಗ–2
7 ಹಸುವಿನ ಕಂದ–2
10 ಹಣ್ಣನ್ನು ಹಿಂಡಿ ತೆಗೆದ ದ್ರವ–2
12 ಗೌರವ, ಅರ್ಧ ಸೇರು–2
14 ಜೋರಾಗಿ ಅಳುವುದು–3
15 ಕಾಲಸೂಚಕ ಯಂತ್ರ–4
16 ನೀಲಿ ಬಣ್ಣದ ಕಮಲ–4

ಮೇಲಿನಿಂದ ಕೆಳಕ್ಕೆ

1 ಎಲ್ಲ[ರು] ಒಂದೆ ಕಡೆ ಸೇರುವುದು–4
2 ಪರೀಕ್ಷಿಸುವಿಕೆ, ತನಿಖೆ–4
3 ಹೆದರಿಕೆ ಉಂಟುಮಾಡು, ನವರಸಗಳಲ್ಲಿ ಒಂದು–4
4 ಜೋಗ್‌ನಲ್ಲಿ ಧುಮುಕುವ ನದಿ–4
6 ನಡುಮನೆ, ಅರೆಭಾಷೆಯ ಬಾಡೆ–3
8 ರೋಗದ ಜೊತೆಗಾರ–3
9 ನಾಲ್ಕು ಯುಗಗಳ ಪೈಕಿ ಕೊನೆಯದು–4
11 ಕೊಳ, ಕಲ್ಯಾಣಿ–4
12 ಮನಸ್ಸಿಗೆ ಸಂಬಂಧಿಸಿದ್ದು–4
13 ಕಲ್ಲನ್ನು ರೂಪಕೊಡುವ ಲಲಿತ ವಿದ್ಯೆ–4

ಪದಬಂಧ 6ಕ್ಕೆ ಉತ್ತರ

ಎಡದಿಂದ ಬಲಕ್ಕೆ

1 ಪಾಣಿಗ್ರಹಣ 3 ವಿನಾಶಕಾಲ
5 ನಕಲಿದೀಪ 8 ಪತ್ನಿ ವಿಯೋಗ 11 ಕ್ಷಣಿಕ
12 ತವರುಮನೆಗೆ ಪಯಣ 14 ಆರತಿ
15 ಅಕ್ಷರಾಭ್ಯಾಸ 17 ಶಕ್ತಿರಹಿತ 19 ಸರವಿನ್ಯಾಸ
20 ನರ್ತನಶಾಲೆ

ಮೇಲಿನಿಂದ ಕೆಳಕ್ಕೆ

1 ಪಾವನ 2 ಪಯಣ 3 ವಿಕೋಪ 4. ಲವಂಗ
6 ಕಲರವ 7 ದೀನ 9 ವಿಲಕ್ಷಣ ಆಕಾರ
10 ಸಂಪಿಗೆ ಹೂವು 12 ತಲೆ 13 ರಾಕ್ಷಸರು
15 ಅಗಸ 16 ಸಮೋಸ 17 ಶಮನ
18 ತರಲೆ

—ಗೋವಿಂದಮ್ಮನ ಅ. ಪ್ರವೀಣಕುಮಾರ, ಬೆಂಗಳೂರು.

ನವೋದಯ ಪ್ರವೇಶ ಪರೀಕ್ಷೆ

ಕೊಡಗಿನ ಗಾಳಿಬೀಡಿನಲ್ಲಿರುವ ನವೋದಯ ವಿದ್ಯಾಲಯದ 1999ನೇ ಶೈಕ್ಷಣಿಕ ವರ್ಷದಲ್ಲಿ ಬೇಕಾಗುವ ಅರ್ಹ ಅಭ್ಯರ್ಥಿಗಳ ಆಯ್ಕೆ ಪರೀಕ್ಷೆಯನ್ನು ದಿನಾಂಕ 14–2–99ರಲ್ಲಿ ಜಿಲ್ಲೆಯ ಬೇರೆ ಬೇರೆ ಸ್ಥಳಗಳಲ್ಲಿ ನಡೆಯಲಿದೆ ಎಂದು ನವೋದಯ ಸ್ಕೂಲಿನ ಪ್ರಿನ್ಸಿಪಾಲ್ ಎಸ್. ಚಂದ್ರಶೇಖರ್ ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ಸ್ಕೂಲಿನ ಮೂಲಕ ಪಡೆಯಬಹುದಾಗಿದೆ.

ರಾಷ್ಟ್ರೀಯ ಕ್ರೀಡೆಗಳು

ಜಪಾನ್—ಜೀಜುಟ್ಸು
ಭಾರತ—ಹಾಕಿ
ಇಂಗ್ಲೆಂಡ್—ಫುಟ್ಬಾಲ್
ಕೆನಡಾ—ಡಿಸ್‌ಹಾಕಿ
ಬ್ರೆಜಿಲ್—ಫುಡ್ಬಾಲ್
ಆಸ್ಟ್ರೇಲಿಯಾ—ಕ್ರಿಕೆಟ್
ಸ್ಕಾಟ್ಲೆಂಡ್—ರಗ್ಬಿ
ಯು. ಎಸ್. ಎ.—ಬೇಸ್‌ಬಾಲ್
ಸ್ಪೇನ್—ಗೂಳಿಕಾಳಗ
ವೆಸ್ಟ್‌ಇಂಡೀಸ್—ಕ್ರಿಕೆಟ್.

○ ಸಂಗ್ರಹ : ಮಣ್ಣಂಡ್ರ ಗೋಪಾಲ ಮಿಥುನ್.

ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಯ ಹಿಂದುಳಿದ ಪಂಗಡ ಗೌಡ ಪ್ರಜೆಗಳು

ಕೊಡಗು ಸಂಗಾತಿ ಪತ್ರಿಕೆಯಲ್ಲಿ ಸಂಪುಟ 2 ಸಂಚಿಕೆ 2, [9-11-1998] ರಲ್ಲಿ ಪ್ರಕಟವಾದ ಬಗ್ಗೆ ನಿಖರವಾದ ಸರಕಾರದ ಅಭಿಪ್ರಾಯವನ್ನು ಇಲ್ಲಿ ಯಥಾವತ್ತಾಗಿ ಅರೆಭಾಷಾ ಗೌಡರ ತಿಳಿವಳಿಕೆಗೆ ನೀಡಲಾಗಿದೆ.

ಕರ್ನಾಟಕ ಸರಕಾರದ, ಸಮಾಜ ಕಲ್ಯಾಣ ಸಚಿವಾಲಯ ಸರಕಾರದ ಅಧಿಸೂಚನೆ ಸಂ : ಎಸ್.ಡಬ್ಲ್ಯೂ. ಎಲ್. 66. ಬಿ.ಸಿ.ಎ. 86 ಬೆಂಗಳೂರು. ದಿನಾಂಕ 13-10-1986ರಲ್ಲಿ ಕರ್ನಾಟಕ ಹಿಂದುಳಿದ ವರ್ಗ ಪ್ರಜೆಗಳ ನೇಮಕಾತಿಗಳು ಮತ್ತು ಮೀಸಲಾತಿ ನೀಡುವ ಬಗ್ಗೆ ಹೊರಡಿಸಿದ ಆದೇಶದಲ್ಲಿ : ಭಾರತ ಸಂವಿಧಾನದ ಅನುಚ್ಛೇದ 15 [4]ರ ಮೇರೆ ವರ್ಗೀಕರಿಸಲಾದ ಹಿಂದುಳಿದ ಪ್ರಜೆಗಳ ಪಟ್ಟಿಯಲ್ಲಿ ಎನೆಕ್ಸರ್ 1 [Annexure-I] ಗ್ರೂಪ್ 'ಸಿ' 2 [ಎಫ್]ನಲ್ಲಿ ಜಾತಿಯ ಹೆಸರು 'Gowda' ಇರುತ್ತದೆ. ಆದರೆ ಭಾರತದ ಸಂವಿಧಾನ ಅನುಚ್ಛೇದ 16 [4]ರ ಮೇರೆಗೆ ರಾಜ್ಯದ ಅಧೀನದಲ್ಲಿರುವ ಸೇವೆಗಳಿಗೆ ನೇಮಕಾತಿ ಮೀಸಲಾತಿ, ಹಿಂದುಳಿದ ವರ್ಗ ಪ್ರಜೆಗಳ ಪಟ್ಟಿಯಲ್ಲಿ ಎನೆಕ್ಸರ್–2 [Annexure–II] ಗ್ರೂಪ್ 'ಸಿ' 2 [ಎಫ್]ನಲ್ಲಿ ಜಾತಿಯ ಹೆಸರು 'Gouda' ಎಂದು ತಪ್ಪು ಬರೆದಿದೆ. ಭಾರತದ ಸಂವಿಧಾನ ಅನುಚ್ಛೇದ 15 [4] ಮತ್ತು 16 [4] ಈ ಎರಡು ಹಿಂದುಳಿದ ವರ್ಗ ಪ್ರಜೆಗಳ ಪಟ್ಟಿಗಳು ಒಂದೇ ಮತ್ತು ವ್ಯತ್ಯಾಸ ಇರುವುದಿಲ್ಲ.

ಕರ್ನಾಟಕ ಸಮಾಜ ಕಲ್ಯಾಣ ಸಚಿವಾಲಯ ಕರ್ನಾಟಕ ರಾಜ್ಯ ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ಹಾಗೂ ಇತರೇ ಹಿಂದುಳಿದ ವರ್ಗಗಳ ಜನಾಂಗದವರಿಗೆ ರಾಜಾಧೀನ ಸೇವೆಗಳಲ್ಲಿನ ನೆ ಮಕಾತಿಗೆ ಭಾರತದ ಸಂವಿಧಾನದ ಅನುಚ್ಛೇದ 16 (4)ರ ಮೇರೆಗೆ ಮೀಸಲಾತಿ ನಿಗದಿ ಪಡಿಸುವ ಕುರಿತು, ಸರ್ಕಾರದ ಆದೇಶ ಸಂಖ್ಯೆ : ಸಕಇ 251 : ಬಿ ಸಿ ಎ : 94, ಬೆಂಗಳೂರು ದಿನಾಂಕ 31ನೇ ಜನವರಿ 1995ರಲ್ಲಿ ಹೊರಡಿಸಲಾಗಿದ್ದು, ಹಾಗೂ ವರ್ಗೀಕರಿಸಲಾದ ಜಾತಿಗಳ ಪಟ್ಟಿಯಲ್ಲಿ Annexure IV Category III [a] 1 [m] "Gouda" ಎಂದು ಬರೆದಿರುವುದರಿಂದ ಸರ್ಕಾರದ ಅಧಿಕಾರಿಗಳು, ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ 'Gowda' ಜನಾಂಗ ದವರನ್ನು ಹಿಂದುಳಿದವರ ಪಟ್ಟಿಗೆ ಸೇರಿಸಿಲ್ಲವೆಂದು ಹೇಳುತ್ತಾರೆ. ಆದುದರಿಂದ ನಮ್ಮ ಜನಾಂಗದವರಿಗೆ ನೇಮಕಾತಿ ಮೀಸಲಾತಿಗೆ ಲಾಭ ಸಿಕ್ಕುತ್ತಿಲ್ಲ.

ನಾವು 'Gowda' ಸಂಸ್ಕೃತಿಯವರು 'Vokkaliga/Gouda' ನಾವು ಅಲ್ಲ. ಭಾರತದ ಸಂವಿಧಾನದ ಅನುಚ್ಛೇದ 16 [4] ಅನ್ವಯ ಸರಕಾರದ ಪಟ್ಟಿಯಲ್ಲಿ ಕೊಡಗು ಮತ್ತು ದಕ್ಷಿಣಕನ್ನಡ ಜಿಲ್ಲೆಯ 'Gowda' ಎಂಬುದಾಗಿ ಬರೆಯಬೇಕು

ಕೇಂದ್ರ ಸರಕಾರದ ಪಂಗಡ ಕಮಿಷನ್ [ಮಂಡಳಿ ಕಮಿಷನ್] 1980ರ ಪ್ರಜೆಗಳ ಪಟ್ಟಿಯಲ್ಲಿ ನಮ್ಮ ಜನಾಂಗದ ಹೆಸರು 'Gowda' ಸೇರಿರುವುದಿಲ್ಲ. ಆದುದರಿಂದ ನೇಮಕಾತಿ ಮೀಸಲಾತಿ ನಮ್ಮ ಜಾತಿಯವರಿಗೆ ಸಿಕ್ಕುತ್ತಿಲ್ಲ.

ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ 'Gowda' ಎಂಬುದಾಗಿ ಕೇಂದ್ರ ಸರಕಾರದ ಪಟ್ಟಿಯಲ್ಲೂ ಬರೆಯಬೇಕು. ಹೆಚ್ಚಿನ ವಿವರಗಳಿಗೆ ಮೇಲ್ಕಂಡ ಕಛೇರಿಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ನನ್ನ ತಂದೆ ದಿವಂಗತ ಶ್ರೀ ನಿಡ್ಯಮಲೆ ಸೋಮಣ್ಣ, ಲೋಕಸಭೆ ಸದಸ್ಯ, ವಿಧಾನಸಭೆ ಸದಸ್ಯ, ಅವರ ಕಾಲದಲ್ಲಿ ಕೊಡಗಿನ ಗೌಡರು ಹಿಂದುಳಿದ ಪಂಗಡದ ಪ್ರಜೆಗಳ ಪಟ್ಟಿಯಲ್ಲಿ ಇದ್ದು ಮಡಿಕೇರಿ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಹಿಂದುಳಿದ ಗೌಡ ಜನಾಂಗದವರಿಗೆ ಶಿಫಾರಸು ಮಾಡಿ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ವಿದ್ಯಾರ್ಥಿ ವೇತನ ಮತ್ತು ಕೊಡಗು ಜಿಲ್ಲೆಯಿಂದ ವೈದ್ಯಕೀಯ ಹಾಗೂ ತಾಂತ್ರಿಕ ಕೋರ್ಸುಗಳಿಗೆ ಪ್ರವೇಶ ಕೊಡಿಸಿದ ಉದಾಹರಣೆ ಈಗಿನ ನಮ್ಮ ಜಾತಿಯವರಲ್ಲಿ ಕೆಲವರಿಗೆ ಗೊತ್ತಿರಬಹುದು. ಆದರೆ, ಈಗ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ಹಿಂದುಳಿದ ಪಂಗಡದ ಪ್ರಜೆಗಳ ಪಟ್ಟಿಯಲ್ಲಿ 'Gowda' ಎಂಬ ಶಬ್ದವು ಇಲ್ಲದಿರುವುದಕ್ಕೆ ನಾವು ವಿಷಾದಿಸಬೇಕು. ಅವರ ನಂತರ ಬಂದ ರಾಜಕೀಯ ಗೌಡ ಮುಖಂಡದವರಿಗೆ ಈ ವಿಷಯ ಗೊತ್ತಿದ್ದು ಯಾಕೆ ಅಸಡ್ಡೆಯಿಂದ ನಿಶಬ್ಧ ಮೂಕರು ಆಗಿದ್ದಾರೆ.

ಚೆಟ್ಟಿನಾಡ ಪ್ರಭ ಕಾರ್ಯಪ್ಪ, (ದಿವಂಗತ ನಿಡ್ಯಮಲೆ ಸೋಮಣ್ಣ ಎಂ ಪಿ ಅವರ ಮಗಳು) ಬೆಂಗಳೂರು

ಹಿ ತ ನು ಡಿ

ಹಣವನ್ನು ದಾನಮಾಡುವುದಕ್ಕೂ, ನ್ಯಾಯವಾಗಿ ಅನುಭವಿಸುವುದಕ್ಕೂ ಉಪಯೋಗಿಸುವವನೇ ನಿಜವಾದ ಹಣಗಾರ.

—ಭೋಜಚರಿತ್ರೆ

Order No. SWI 66 BCA 86 Bangalore dated 13th October 1986

Group 'C' Extract

Annexure-I

List of Backward Classes of Citizens under Article 15 (4) of the Constitution

Group C :— 1. Muslim

2. a. Vokkaliga, b. Vakkaliga, c. Hallikar, d. Kunchitiga, e. Reddy f. Gowda, g. Kapu, h. Heggade, i. Kamma, j. Raddy, k. Gownder, l. Sarp.

Order No. SWI 66 BCA 86 Bangalore dated 13th October 1986

Annexure-II Group C Extract

Annexure II

List of Backward Classes of Citizens under Article 16 (4) of the Constitution

Group C :—1. Muslim

2. a. Vokkaliga, b. Vakkaliga, c. Hallikar, d. Kunchitiga, e. Reddy f. Gouda, g. Kapu, h. Heggade, i. Kamma, j. Raddy, k. Gownder l. Sarpa Vokkaliga

ಸರ್ಕಾರದ ಆದೇಶ ಸಂಖ್ಯೆ : ಸಕಇ 251 ಬಿ.ಸಿ.ಎ. 94, ಬೆಂಗಳೂರು, ದಿನಾಂಕ 31–1–1995

Annexure IV Category III (a) Extract

1. a. Vokkaliga, b. Vakkaliga, c. Sarpa Vokkaliga, d. Hallikar Vokkaliga e. Namdhari Vokkaliga, f. Gangadkar Vokkaliga, g. Das Vokkaliga, h. Reddy Vokkaliga, i. Marasu Vokkaliga, j. Reddy, k. Hallikar, l. Kunchitiga, m. Gouda, n. Kapu, o. Heggade, p. Kamma, q. Raddy, r. Gownder

2. Kodagaru

ವಿ. ಸೂ. : ಎನೆಕ್ಸರ್ 1, 2, 4ರ ಪ್ರಕಾರ ಇಂಗ್ಲಿಷ್ ಅಕ್ಷರದ W ಬದಲು U ಎಂದು ಬದಲಾಗಿದ್ದು ಸ್ಪಷ್ಟವಾಗಿ ಗೋಚರವಾಗುತ್ತಿದೆ. ಇದು ಬೆರಳಚ್ಚಿನ ತಾಂತ್ರಿಕ ದೋಷವಾಗಿರಬಾರದೇಕೆ ? ಸಂಬಂಧಪಟ್ಟವರು ಈ ಬಗ್ಗೆ ಮುತುವರ್ಜಿ ವಹಿಸಿ ಸರಿಪಡಿಸುವರೆ ?

—ಸಂಪಾದಕಿ

ವಿಶ್ವದ ಪ್ರಮುಖ ವಿಜ್ಞಾನಿಗಳು ಮಾಡಿದ ಶೋಧ

ವಿಮಾನ—ರೈಟ್ ಸಹೋದರರು

ಬೈಸಿಕಲ್—ಎಮ್. ಸಿ. ಮಿಲನ

ಡೈನಮೊ—ಮೈಕೇಲ ಫೇರಡೆ

ಡೀಸಲ್ ಇಂಜಿನ್—ರುಡಾಲ್ಫ್ ಡೀಸಲ್

ವಿದ್ಯುತ್ ಬಲ್ಬ್—ಟಿ. ವಿ. ಎಡಿಸನ್

ಟೆಲಿಫೋನ್—ಗ್ರಾಹಮ್‌ಬೆಲ್

ರಬ್ಬರ್ ಟಯರ್—ಡನಲಾಪ

ಸ್ಕೂಟರ್—ಜಿ. ಬ್ರಾಡಶ

ಪ್ರಿಂಟಿಂಗ್ ಪ್ರೆಸ್—ಕೆಸ್ಕಟನ್

○ಊರೋಳನ ಎಸ್. ತುಳಸಿ ಸುಬ್ಬಯ್ಯ, ಅವಂದೂರು.

ಗೌಡರ ವಿವಾಹ ಪದ್ಧತಿಯ ಶೋಭಾನೆಗಳು

[ಹಿಂದಿನ ಸಂಚಿಕೆಯಿಂದ]

ಕಿವಿಯಾ ಮೇಲೆ, ಕಿವಿಯಾ ಮೇಲೆ ಕಿವಿಯಾ ಓಲೆ
ಹೊಳೆವುದು ಥಳಾ ಥಳಾ
ಅದನ್ನಿಟ್ಟರೆ ಹೊಳೆವುದು ಪಳಾ ಪಳಾ ॥
ಸಾಲಮಾಡಿ ತರಾಬೇಡಿ ನಮಗಾಗಿ ಹೆಚ್ಚಿಗೇನು
ಬೇಡುವುದಿಲ್ಲ ನಿಮಗಾಗಿ
ಕೊರಳಾ ಮೇಲೆ, ಕೊರಳಾ ಮೇಲೆ ಕೊರಳಾ ಪದಕ
ಥಳಾ ಥಳಾ
ಅದನ್ನಿಟ್ಟರೆ ಹೊಳೆವುದು ಪಳಾ ಪಳಾ ॥ ವಜ್ರ ॥
ನಡುವಿನ್ ಪಟ್ಟೆ ನಡುವಿನ್ ಪಟ್ಟೆ ನಡುವಿನ್ ಪಟ್ಟೆ
ಗೆಜ್ಜೆ ಡಾಬೂ ಥಳಾ ಥಳಾ
ಅದನ್ನಿಟ್ಟರೆ ಹೊಳೆವುದು ಪಳಾ ಪಳಾ ॥
ಕೈಯ್ಯಾ ಮೇಲೆ ಕೈಯ್ಯಾ ಮೇಲೆ ಕೈಯ್ಯಾ ಬಳೆ
ಹೊಳೆವುದು ಥಳಾ ಥಳಾ
ಅದನ್ನಿಟ್ಟರೆ ಹೊಳೆವುದು ಪಳಾ ಪಳಾ ॥
ಕಾಲ ಮೇಲೆ ಕಾಲ ಬೆರಳಾ ಮೇಲೆ ಬೆರಳಿನುಂಗುರ
ಹೊಳೆವುದು ಥಳಾ ಥಳಾ
ಅದನ್ನಿಟ್ಟರೆ ಹೊಳೆವುದು ಪಳಾ ಪಳಾ ॥ಸಾಲಮಾಡಿ॥
ಮೈಯ್ಯ ಮೇಲೆ ಮೈಯ ಮೇಲೆ ಮೈಯ್ಯಲ್ಲಿರುವ ಜರೀ
ಸೀರೆ ಥಳಾ ಥಳಾ
ಅದನ್ನಿಟ್ಟರೆ ಹೊಳೆವುದು ಪಳಾ ಪಳಾ ॥ ಸಾಲಮಾಡಿ ॥

9. ಅ) ಹೆಣ್ಣು ಹುಡುಕುವ ಶೋಬಾನೆ ;

ಬಾಳೆಹನಿ ಬಿದ್ದ ಬಾಲೆವರು ಸತಿಗೆದ್ದ ಬಾಲೆವರು ನಾವು ಗೆದ್ದ ಗಳೀಗೇಲಿ । ಬಾಲೆಯುವರು ನಾವು ಗೆದ್ದ ಗಳಿಗೇಲಿ ಮಾವನವರೇ ನಾವು ಹೋಗಿ ಬರುತ್ತೇವೆ ಮನೆ ದೂರ ॥ ನಿಂಬೆ ಹನಿ ಬಿದ್ದ ರಂಬೆಯುವರು ನಾವು ಗೆದ್ದ ಗಳೀಗೆಲಿ । ರಂಬೆವರು ನಾವು ಗೆದ್ದ ಗಳಿಗೇಲಿ ಅತ್ತೆಮ್ಮನವರೇ ನಾವು ಹೋಗಿ ಬರುತ್ತೇವೆ ಮನೆ ದೂರ ॥ ಸೇರಲ್ಲಿರುವ ಮುತ್ತು ಸೇರಲಿಕ್ಕೆ ಅತಿ ಕಷ್ಟ ಸೇರಿತೋ ಶಿವನ ದಯುದಿಂದ । ಸೇರಿತೋ ಶಿವನ ದಯುದಿಂದ ಮಾವನವರೆ ಹೋಗಿ ಬರುತ್ತೇವೆ ಮನೆ ದೂರ ॥ ಮಾನದಲ್ಲಿರುನ ಮುತ್ತು ಸಿಕ್ಕಲಿಕ್ಕೆ ಅತಿ ಕಷ್ಟ ಸಿಕ್ಕಿತೋ ಶಿವನ ದಯುದಿಂದ । ಸಿಕ್ಕಿತೋ ಶಿವನ ದಯುದಿಂದ ಅತ್ತೆಮ್ಮನವರೇ ನಾವು ಹೋಗಿ ಬರುತ್ತೇವೆ ಮನೆ ದೂರ ॥ ಪಟ್ಟೆ ಹಚ್ಚಡದೊಳಗೆ ಮುಚ್ಚಿ ಮಡುಗಿದ ಮಗಳು ಸಿಕ್ಕಿತೋ ಶಿವನ ದಯುದಿಂದ । ಸಿಕ್ಕಿತೋ ಶಿವನ ದಯುದಿಂದ ಮಾವನವರೇ ನಾವು ಹೋಗಿಬರುತ್ತೇವೆ ಮನೆ ದೂರ ॥ ಶ್ಯಾಲೆ ಹಚ್ಚಡದೊಳಗೆ ಮುಚ್ಚಿ ಮಡುಗಿನ ಮಗಳು ಸಿಕ್ಕಿತೋ ಶಿವನ ದಯುದಿಂದ । ಸಿಕ್ಕಿತೋ ಶಿವನ ದಯುದಿಂದ ಅತ್ತೆಮ್ಮನವರೇ ಹೋಗಿ ಬರುತ್ತೇವೆ ಮನೆ ದೂರ ॥ ಕಡಲೆ ಹೊಲದಲ್ಲಿ ನಿಂತುಂಟು ನಮ್ಮ ದಿಬ್ಬಣ ನಾವು ಹೋಗಿ ಬರುವ ತನಕ ಬಲು ಜೋಕೆ । ಉದ್ದಿನ ಹೊಲದಲ್ಲಿ ನಿಂತುಂಟು ನಮ್ಮ ದಿಬ್ಬಣ ನಾವು ಹೋಗಿ ಬರುವ ತನಕ ಬಲು ಜೋಕೆ ॥

ಆ) ಹೆಣ್ಣು ಹಿಡಿಯುವ ಶೋಭಾನೆ :

ಮುತ್ತಿನ ಸೆರಗಡಿಲಿ ಮುಚ್ಚಿಟ್ಟ ಮಾವನ ಮಗಳು ಸಿಕ್ಕಿತೋ ಶಿವನ ದಯೆಯಿಂದ ॥ ಸಿಕ್ಕಿತ್ತೋ ಶಿವನ ದಯುದಿಂದ ಮಾವನ ಮಗಳ ರಾಜ್ಯಕ್ಕೆ ನಮ್ಮಣ್ಣ ದೊರೆರಾಯ ॥ ಹವಳದ ಸೆರಗಡಿಲಿ ಮುಚ್ಚಿಟ್ಟ ಎಳೆ ಮುದ್ದು ॥ ಸಿಕ್ಕಿತ್ತೋ ಶಿವನ ದಯುದಿಂದ ॥ ಸಿಕ್ಕಿತ್ತೋ ಶಿವನ ದಯುದಿಂದ ಅತ್ತೆಯ ಮಗಳೇ ನಾವು ನೆನೆದ ಕಾರ್ಯ ನೆರವಾದೋ ॥ ಅತ್ತೆಯ ಮಗಳ ರಾಜ್ಯಕ್ಕೆ ನಮ್ಮಣ್ಣ ದೊರೆರಾಯ ॥ ಚಿನ್ನದ ಸೆರಗಡಿಲಿ ಮುಚ್ಚಿಟ್ಟ ಮಾಣಿಕ್ಯ ಸಿಕ್ಕಿತ್ತೋ ಶಿವನ ದಯುದಿಂದ ಸಿಕ್ಕಿತ್ತೋ ॥ ಭಾವನ ತಂಗಿ ರಾಜ್ಯಕ್ಕೆ ನಮ್ಮಣ್ಣ ದೊರೆರಾಯ ಪಾರ್ವತಿ ಸೀತಾದೇವಿಗಳ ವಸ್ತ್ರದಡಿಯಲ್ಲಿ ಮುಚ್ಚಿಟ್ಟ ಎಳೆ ಶಿಶುವು ಸಿಕ್ಕಿತ್ತೊ ॥ ಶಿವನಾ ದಯುದಿಂದ ಸಿಕ್ಕಿತ್ತೋ ॥ ನಾದಿನಿ ಮೈದುನರ ಅಕ್ಕಂಗೆ ನಾವು ನೆನೆದ ಕಾರ್ಯ ನೆರವಾದೋ ಶಿವನಾ ದಯೆದಿಂದ ನೆರವಾದೋ ನಾದಿನಿ ಮೈದುನರ ಅಕ್ಕನ ರಾಜ್ಯಕ್ಕೆ ನಮ್ಮಣ್ಣ ದೊರೆರಾಯ ॥

10. ವಧುವಿನ ಶೃಂಗಾರ ಸಮಯದಲ್ಲಿ

ಅ) ತಲೆ ಬಾಚುವಾಗ ಹೇಳುವ ಹಾಡು

ಬ್ರಹ್ಮನ ರಾಣಿಯು ನಿಮ್ಮ ಶ್ರೀ ಚೆನ್ನ ಚರಣಕ್ಕೆರಗುವೆನು । ಹಣ್ಣು ತೆಂಗಿನ ಕಾಯಿ ತರಗು ಚಕ್ಕುಲಿಯ ಚೆನ್ನ ಗಣಪತಿಗೆ ನೈವೇದ್ಯಕ್ಕೆ ಇಟ್ಟು । ನಿಸ್ತಲಮ್ಮಾಯಿಗೆ ತುರು ಬಿಕ್ಕುವ । ಪದವನೆ ಮಂಡಿಸುವೆ ನಾನು ಮುದದಿಂದ । ಹನ್ನೆರಡು ಜನಗಳ ಮುತ್ತಿನ ಚಪ್ಪರ ಚಿನ್ನದ ಕಂಬವು ಮುತ್ತು ರತ್ನದ ನವರತ್ನ ಬೀದಿಗೆಯ । ಚಿನ್ನ ಮಾಣಿಕದ । ತಲೆ ಜಂತೆಗಳ ತಂದಿರಿಸಿ ನಿಸ್ತಲಮ್ಮಾಯಿಗೆ ಕುಳ್ಳಿರುವ ಜನರಿಗೆ ವಿಸ್ತಾರವ ನೋಡಿ ಜನರೆಲ್ಲಾ । ಹತ್ತೆಂಟು ಜನಗಳಿಗೆ ಮುತ್ತಿನ ಕಂಬವು ಚಿನ್ನದ ಚಪ್ಪರ । ಚಿನ್ನ ಮಾಣಿಕದ ತಲೆ ಜಂತೆಗಳ ತಂದಿರಿಸಿ । ಕನ್ನಮ್ಮಾಯಿಗೆ ಕುಳ್ಳಿರುನ ಜಗಲಿಯ ವಿಸ್ತಾರವ ನೋಡಿ ಜನರೆಲ್ಲ ।

(ಮುಂದುವರೆದುದು)

ಮಡಿಕೇರಿ ದಸರಾ ಹಬ್ಬ

ಮಡಿಕೇರಿ ದಸರಾ ಇತಿಹಾಸದಲ್ಲಿಯೇ ಪ್ರಪ್ರಥಮ ಬಾರಿಗೆ ಸ್ಪರ್ಧೆಯಾಗಿ, ಗೌಡ ಸಾಂಸ್ಕೃತಿಕ ಅಕಾಡೆಮಿ ಆಶ್ರಯದಲ್ಲಿ ಕಲಾಪ್ರತಿಭೆ ನೀಡಿ, ಮನರಂಜಿಸಿ ಭೇಷೆನಿಸಿದ ಬೆಂಗಳೂರಿನ ಅಮ್ಮಾಜೀರ ಪೊನ್ನಪ್ಪನವರ ಕಲಾ ತಂಡ

ಮಡಿಕೇರಿ ದಸರಾ ಮುಕ್ತಾಯದ ದಿನದ ಸಾಂಸ್ಕೃತಿಕ ಕಾರ್ಯಕ್ರಮಗಳು ಪ್ರೇಕ್ಷಕರನ್ನು ಆಕರ್ಷಿಸಿ, ರಂಜಿಸಿ ಸದಾ ಮನಸ್ಸಿನಲ್ಲಿರುವಂತೆ ಅಚ್ಚೊತ್ತಿದ್ದ ತಂಡಗಳು ಸ್ಥಳೀಯ ಸ್ನೇಹ ಸಂಗಮ ತಂಡ ಮತ್ತು ಗೌಡ ಸಾಂಸ್ಕೃತಿಕ ಅಕಾಡೆಮಿ ಪರ ವಾಗಿ ಬೆಂಗಳೂರಿನಿಂದ ಆಗಮಿಸಿದ ಅಮ್ಮಾಜೀರ ಪೊನ್ನಪ್ಪ ತಂಡ.

ಗೌಡ ಜನಾಂಗದಲ್ಲಿ ಮೊಟ್ಟಮೊದಲ ಬಾರಿಗೆ ದಸರಾ ಕಾರ್ಯಕ್ರಮವನ್ನು ನೀಡಿ ಸಾಬೀತು ಪಡಿಸಿದ ತಂಡ ಈ ಅಮ್ಮಾಜೀರ ಪೊನ್ನಪ್ಪ ಮತ್ತು ಸಂಗಡಿಗರೆಂದರೆ ಅತಿಶಯೋಕ್ತಿ ಯಾಗಲಾರದು. ಪೊನ್ನಪ್ಪರವರ ತಂಡ ದಸರಾ ಕಾರ್ಯ ಕ್ರಮದ ಮಹತ್ವ ಹೆಚ್ಚಿಸುವಲ್ಲಿ ಮುಖ್ಯ ಪಾತ್ರ ವಹಿಸಿತು. 15 ಜನರ ತಂಡ ಕಟ್ಟಿ ಕೇವಲ 8 ನಿಮಿಷಗಳ ಸಮಯ ಪಡೆದು, ಸುಮಾರು 18 ನಿಮಿಷಗಳ ಕಾಲ ನೃತ್ಯ ಕಾರ್ಯಕ್ರಮ ನೀಡಿ ಅದರ ಸೊಬಗಿನ ಛಾಪನ್ನು ಮೂಡಿಸುವಲ್ಲಿ ಯಶಸ್ವಿಯಾದರು. ಜ್ಯೋತಿಯ ಬೆಳಗೋಣ, ಕಾವೇರಿ ನಾಡನ್ನು ಕಟ್ಟೋಣಾ, ನಾಡನ್ನು ಕಟ್ಟುವ ಕುರಿತ ವಿಷಯವಾಗಿದ್ದು, ಹಾವ, ಭಾವ, ಲಯ, ಸಂಗೀತಕ್ಕೆ ತಕ್ಕಂತೆ ಹೆಜ್ಜೆ ಇಡುತ್ತಿದ್ದುದು ಸುಂದರ ವಾಗಿತ್ತು.

ಸುಗ್ಗಿ ಸುವ್ವಾಲಿ ಕುಣಿತ–ಕೋಲಾಟದ ಹಾಡಿನ ನೃತ್ಯ ಚೊಕ್ಕವಾಗಿ ಮೂಡಿ ಬಂತು. ಚಿಕ್ಕ ಮಕ್ಕಳಿಬ್ಬರು ಸಹ ತಮ್ಮ ಪ್ರತಿಭೆಯನ್ನು ಬೆಳಗಿಸಿದರು. ಕೋಲಾಟದಲ್ಲಿ ಕೋಲು ಹೊಡೆಯುತ್ತಿದ್ದುದು, ತಾಳಕ್ಕೆ ತಕ್ಕಂತೆ ಚಾಚೂತಪ್ಪದೇ ತಮ್ಮ ಚಾಕಚಕ್ಯತೆಯನ್ನು ತೋರಿಸಿದರು. ನಮ್ಮದ್ ಇದ್ ನಮ್ಮದ್ ಅರೆಭಾಷೆ ನಮ್ಮದ್, ಈ ಮೇಲಿನ ಎರಡು ಗೀತೆ ಗಳಿಗಿಂತಲೂ ಉತ್ತಮವಾಗಿ ಮೂಡಿಬಂತು. ಸೇರಿದ್ದ ಜನ ಮನವನ್ನು ರಂಜಿಸಿತು. ಈ ಮೇಲಿನ ಎಲ್ಲಾ ಕಾರ್ಯಕ್ರಮ ಗಳು ಅರೆಭಾಷೆ ಗೌಡರ ಹಳೆ ಪದ್ಧತಿಯ ಕುಪ್ಪಸದಟ್ಟಿ, ರುಮಾಲು ಮತ್ತು ಗೇಂಟಿಕಟ್ಟಿ ಸೀರೆಯುಟ್ಟು ತಲೆಗೆ ಕೋರ್ ಚೌಕವನ್ನು ಕಟ್ಟಿ ನರ್ತಿಸಿದ್ದು, ಸೇರಿದ್ದ ಇಡೀ ಜನ ಸಮು ದಾಯಕ್ಕೆ ಖುಷಿಯನ್ನು ತಂದಿತು. ಕಾಲ ಗರ್ಭದಲ್ಲಿ ಸೇರಿ ಇತಿಹಾಸವಾಗಲಿದ್ದ ನಮ್ಮ ಹಳೇ ಸಂಪ್ರದಾಯದ ಉಡುಪನ್ನು ಪುನರ್‌ಜೀವನಗೊಳಿಸುವ ನಿಟ್ಟಿನಲ್ಲಿ "ಸಂಗಾತಿಯ ಧ್ಯೇಯ ವನ್ನು" ನಾಡಿನ ಮೂಲೆ ಮೂಲೆಗೆ ಕೊಂಡೊಯ್ಯುತ್ತಿರುವ ಅಮ್ಮಾಜೀರ ಪೊನ್ನಪ್ಪ ತಂಡಕ್ಕೆ ಸಂಗಾತಿಯ ನಮನಗಳು.

—ಪಟ್ಟಡ ಪ್ರಭಾಕರ.

ಭಾರತದ ವೀರ ಪತಾಕೆ

ಹಾರುತಿದೆ ಭಾರತದ ವೀರ ಪತಾಕೆ ।
ಬೀರುತಿದೆ ಶಾಂತಿಯನು ಎಲ್ಲ ಜಗಕ್ಕೆ ॥
ಅದೋ ! ಬಾನಿನೊಳು ಶಬ್ದವನು ಕೇಳ ।
ಜನರೇ ಆ ನವ ಸಂದೇಶದಿ ನೀವೆ ಬಾಳ ॥
ಈ ನರ ಜನ್ಮವು ಕ್ಷಣಿಕ ಜಾಗೃತರಾಗಿ ।
ಆನಂದಾಗರವೆಲ್ಲಿ ನೋಡುವರಾಗಿ ಹಾಯಾಗಿ ॥
ಅದೋ ಮೂರುವಿಧ ಬಣ್ಣವನ್ನು ನೋಡಿ ।
ಸತ್ಯ ಸಾರ ಅಹಿಂಸೆಯು ಶಾಂತಿ ಜೋಡಿ ॥
ಭಾರತ ಮಾತೆಗೆ ಮುದದಿ ಜೋಗುಳ ಹಾಡಿ ।
ಭೋರೆನುತ ಬಾಂದಳದಿ ಮೆರೆವುದು ನೋಡಿ
ಮಾತಾಡಿ ॥

—ಸಬ್ಬಂಡ್ರ ಆರ್. ಶರತ್‌ಕುಮಾರ್
ಮಕ್ಕಂದೂರು.

ಪ್ರಥಮ ಬಹುಮಾನ

ಮಡಿಕೇರಿ ದಸರಾ ದಶಮಂಟಪಗಳ ಪೈಕಿ ಪ್ರಥಮ ಬಹುಮಾನ ಗಳಿಸಿದ ಕುಂದೂರು ಮೊಟ್ಟೆ ಚಾಮುಂಡೇಶ್ವರಿ ದೇವಾಲಯದ 25ನೇ ವರ್ಷದ ಕಲಾಕೃತಿ ಮಹಿಷಾಸುರ ಮರ್ದಿನಿಯು ಸಿಂಹಾರೂಢಳಾಗಿ ರಕ್ಕಸಿಯೊಡನೆ ಕಾದಾಡುವ ದೃಶ್ಯವಾಗಿತ್ತು. ಕುಂದೂರು ಮೊಟ್ಟೆ ದೇವಸ್ಥಾನ ದಸರಾ ಸಮಿತಿಯ ಅಧ್ಯಕ್ಷರಾಗಿ ಪ್ರಥಮ ಬಹುಮಾನ ಗಳಿಸುವತ್ತ ಮುನ್ನಡೆಸಿದವರು ಬಿಳಿಗೇರಿ ಗ್ರಾಮದ ಶ್ರೀ ತುಂತ್ತಜ್ಜೀರ ವೆಂಕಟೇಶ್ [ಗಣೇಶ್] ಇವರು ಕೊಡಗು ಗೌಡ ಅಕಾಡೆಮಿಯ ಹಾಲಿ ಅಧ್ಯಕ್ಷರು ಸಹ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

O ವರದಿ : ಸಂಗಾತಿ

ಮೈಸೂರಿನ ಕೈಲ್ ಪೋಳ್ದ್‌ನಲ್ಲಿ ಮುರಿದ ಸಂಪ್ರದಾಯ–ತಿರಸ್ಕರಿಸಿದ ಜನಾಂಗ

ಮನುಷ್ಯನ ಜೀವನದಲ್ಲಿ ಛಲವೆಂಬುವುದು ಮುಖ್ಯ. ಈ ಛಲ ತನ್ನ ಜೀವನದ ರೂಪು ರೇಷೆಗಳನ್ನೇ ಬದಲಿಸುತ್ತದೆ ಛಲವಿದ್ದರೆ ಏನೇ ಕೆಲಸವನ್ನಾದರೂ ಮಾಡಬಹುದು ಎಂಬುವುದಕ್ಕೆ ನಮ್ಮ ಪುರಾಣಗಳೇ ಸಾಕ್ಷಿ. ವಿಶ್ವಾಮಿತ್ರ ಛಲದಿಂದ ಋಷಿಯಾಗಿದ್ದು ಎಲ್ಲವರಿಗೂ ಗೊತ್ತೆ ಇದೆ. ಆದುದರಿಂದ ಈ ಛಲವೆಂಬ ಪದವನ್ನು ಒಳ್ಳೆಯ ಕ್ರಿಯೆಗೆ ಮುಡಿಪಾಗಿಡಬೇಕೆ ಹೊರತು, ಜನಾಂಗದೊಡನೆ ದ್ವೇಷ ಸಾಧಿಸುವುದಾಗಲಿ, ಜನಾಂಗವನ್ನು ಕೀಳುದರ್ಜೆಯಿಂದ ಕಾಣುವುದಾಗಲಿ ಅಥವಾ ತಮ್ಮ ದೊಡ್ಡತನವನ್ನು ಪ್ರದರ್ಶಿಸುವುದಕ್ಕಾಗಲಿ ಇರಬಾರದು. ಇದು ವಿಷಾದನೀಯ ಹಾಗೂ ಖಂಡನೀಯ.

ದಿನಾಂಕ 4-10-1998ನೇ ಭಾನುವಾರ ಮೈಸೂರಿನ ಗೌಡ ವಿದ್ಯಾರ್ಥಿ ನಿಲಯದಲ್ಲಿ ಕೈಲ್‌ಪೋಳ್ದ್ ಆಚರಣೆಯೆಂದು ಪತ್ರಿಕೆಗಳಲ್ಲಿ ಪ್ರಕಟಿಸಿದ್ದು ಯಾರಿಗೂ ಸರಿಯಾಗಿ ತಿಳಿದಿರಲಿಲ್ಲ.

ತಡಿಯಪ್ಪನ ಕುಮಾರಜಯ, ಮೈಸೂರು.

ಕೆಲವರು ಪತ್ರಿಕೆಯಲ್ಲಿ ನೋಡೇ ಇಲ್ಲವೆಂದರೆ, ಇನ್ನು ಕೆಲವರು ಪ್ರತಿವರ್ಷ ಮನೆಮನೆಗೆ ಬರುತ್ತಿದ್ದರಲ್ಲಾ ಅದಕ್ಕೆ ನಾವು ಕಾದೆವು ಎಂದು ಉತ್ತರಿಸುತ್ತಿದ್ದಾರೆ. ಆದರೆ ಪ್ರತಿಯೊಬ್ಬರ ಬಾಯಲ್ಲಿ ಬರುತ್ತಿದ್ದ ಒಂದೇ ಪ್ರಶ್ನೆ ಏನೆಂದರೆ ನಮ್ಮ ಜನಾಂಗದ ಕಣ್ಮಣಿಯಾದ ಕೊಡಗು ಸಂಗಾತಿಯಲ್ಲಿ ಏಕೆ ಹಾಕಲಿಲ್ಲ. ಬದಲಾಗಿ ಮೈಸೂರು ಮಿತ್ರ ಹಾಗೂ ಆಂದೋಲನದಲ್ಲಿ ಹಾಕಿಸಿದ್ದಾರಂತೆ. ಸಂಗಾತಿಯಲ್ಲಿ ಪ್ರಕಟಿಸಬಹುದೆಂದು ಕಾದುಕೊಂಡಿದ್ದೆವು ಎಂಬುದಾಗಿ ಜನರು ಹೇಳುತ್ತಿದ್ದಾರೆ. ಅಲ್ಲದೇ ನಮ್ಮ ಜನಾಂಗದ ಪತ್ರಿಕೆ ಕೊಡಗು ಸಂಗಾತಿಯಾಗಿದ್ದರೆ ಜನಾಂಗದ ಪ್ರತಿ ಮನೆ ಮನೆಗೆ ಹೋಗುತ್ತಿತ್ತು. ಅದನ್ನು ಬಿಟ್ಟು ಬೇರೆ ಪತ್ರಿಕೆಗಳಲ್ಲಿ ಹಣಕೊಟ್ಟು ಹಾಕಿಸಿದ್ದಾರೆ. ಇದು ಸರಿಯೇ ? ಎಂದು ಪ್ರಶ್ನಿಸುತ್ತಿದ್ದಾರೆ. ಅದೂ ಅಲ್ಲದೆ ಸಂಗಾತಿ ಕಛೇರಿಗೆ ಹಲವಾರು ದೂರವಾಣಿ ಕರೆಗಳು ಬಂದಿವೆ ಎಂದು ತಿಳಿದು ಬಂದಿದೆ. ಆದರೆ ಈ ಸಾರಿ ಸಮಾಜದ ಆಡಳಿತಮಂಡಳಿ ಮನಬಂದಂತೆ ವರ್ಷಂಪ್ರತಿ ನಡೆಯುತ್ತಿದ್ದ ಸಂಪ್ರದಾಯವನ್ನು ಮುರಿದೆ ಬಿಟ್ಟಿದ್ದಾರೆ. ಬೇಕಾದರೆ ವಿದ್ಯಾಸಂಘಕ್ಕೆ ಬಂದು ಟೋಕನ್ ತೆಗೆದುಕೊಳ್ಳಲಿ, ಮನೆ ಮನೆಗೆ ಹೋಗಿ ಆಮಂತ್ರಿಸಲು ಸಾಧ್ಯವಿಲ್ಲವೆಂದು ಖಡಾಖಂಡಿತವಾಗಿ ಹೇಳಿದಾಗ ಆಡಳಿತ ಮಂಡಳಿಯ ಉಳಿದವರು ಅದಕ್ಕೆ ಧ್ವನಿಗೂಡಿಸಿ, ಮೀಟಿಂಗ್‌ನಲ್ಲಿ ಪಾಸ್‌ಮಾಡಿದ್ದು ಅಲ್ಲದೆ ಟೋಕನ್ ತೆಗೆದುಕೊಳ್ಳಲು 28-9-98 ಕೊನೆಯ ದಿನಾಂಕವೆಂದು ನಿಗದಿ ಮಾಡಿ ಪತ್ರಿಕೆಯಲ್ಲಿ ಹಾಕಿಸಿ ತಮ್ಮ ಕೆಲಸ ಮುಗಿಯಿತೆಂದು ಖುಷಿಯಿಂದ 4ನೇ ತಾರೀಖನ್ನು ಎದುರು ನೋಡುತ್ತಿದ್ದುದ್ದು ಸರಿ. ಆದರೆ ಆಡಳಿತ ಮಂಡಳಿಯವರು ಅಂದುಕೊಂಡಿದ್ದ ಹಾಗೆ ಆಗದೆ ಇದ್ದುದರಿಂದ ಅವರಿಗೆ ತಳಮಳ ಪ್ರಾರಂಭವಾಗಿರಬೇಕು. ನಮ್ಮವರ ಯಾರ ಯಾರ ಮನೆಗಳಲ್ಲಿ ಫೋನ್ ಇದೆಯೋ ಅವರ ಮನೆಗಳಿಗೆ ಫೋನ್ ಮಾಡಿದ್ದೇ ಮಾಡಿದ್ದು. ಇಲ್ಲಿಯೂ ಆಡಳಿತ ಮಂಡಳಿಯವರು ಪುನಃ ತಾವೇ ಮಾಡಿದ್ದ ಕಾನೂನನ್ನು ಅಂದರೆ ಟೋಕನ್ ತೆಗೆದುಕೊಳ್ಳಲು 28-9-98 ಎಂದು ನಿಗದಿ ಮಾಡಿದ್ದ ಕಟ್ಟಾಜ್ಞೆಯನ್ನು ಉಲ್ಲಂಘಿಸಿಯೇ ಬಿಟ್ಟರು. ಆದರೂ ನಮ್ಮ ಜನಾಂಗದವರು ಇವರ ಈ ರೀತಿಯ ವರ್ತನೆಗೆ ಮರುಳಾಗಲಿಲ್ಲ. ತಮಗೂ ಸ್ವಾಭಿಮಾನದ ಕೈಂಪೆ ಇದೆ ಎಂದು ತೋರಿಸಿಯೇ ಬಿಟ್ಟರು. ಆದರೆ ಕೆಲವು ನಮ್ಮ ಬಾಂಧವರು ಆಡಳಿತ ಮಂಡಳಿಯವರ ಫೋನ್ ಕರೆಗೆ ಒಲ್ಲದ ಮನಸ್ಸಿನಲ್ಲಿ ಬೆಲೆಕೊಟ್ಟು ಹೋಗಿದ್ದರು. ಆದರೆ ಸೇರಿದ್ದು ಮಾತ್ರ 90 ಮಂದಿ [ಅಲ್ಲಿನ ಹಾಸ್ಟೆಲ್‌ನಲ್ಲಿ ಓದುವ 30 ವಿದ್ಯಾರ್ಥಿಗಳು ಸೇರಿ] ಇಲ್ಲಿ ಸೇರಿದ್ದ 90 ಮಂದಿಯಲ್ಲಿ ಕೆಲವರು ಆಡಳಿತ ಮಂಡಳಿಯ ಈ ರೀತಿಯ ಕೈಲ್ ಮುಹೂರ್ತ ಆಚರಣೆಯನ್ನು ಟೀಕಿಸುತ್ತಿದ್ದರೆಂದು ಅವಿಶ್ವಾಸನೀಯ ಮೂಲಗಳಿಂದ ತಿಳಿದುಬಂದಿದೆ. ಈ ಕೈಲ್ ಪೋಳ್ದ್ ಆಚರಣೆ ಯಾರ ಪುರುಷಾರ್ಥಕ್ಕೆ ? ಇದರಿಂದ ಸಾಧಿಸಿದ್ದಾದರೂ ಏನು ? ಇಂದು ಸಮಾಜದವರೆಂದು ಹೇಳಿಕೊಳ್ಳುತ್ತಿರುವ ಆಡಳಿತ ಮಂಡಳಿಯವರು ಆಚರಿಸಿದ ಹಬ್ಬದ ಪರಿಯೇ ? ಇಲ್ಲಿ ನೆನಪಿನಲ್ಲಿಡಬೇಕಾದ ಒಂದಂಶವೇನೆಂದರೆ ನಮ್ಮ ಜನಾಂಗದ ಯುವಕ/ಯುವತಿಯರು ಇವರಿಗೆ ಸರಿಯಾಗಿ ಸಹಕರಿಸದೆ ಇರುವುದರಿಂದ ಮನೆ ಮನೆಗೆ ಹೋಗಿ ಜನಾಂಗದವರನ್ನು ಆಮಂತ್ರಿಸಲು ಸಾಧ್ಯವಾಗಿಲ್ಲ ಎಂಬುವುದು. ಮೈಸೂರಿನಲ್ಲಿ ಸಮಾಜದವರೆಂದು ಹೇಳಿಕೊಳ್ಳುತ್ತಿರುವವರು ಆರ್ಥಿಕವಾಗಿ ಮುಂದುವರಿದವರೆಂದು ಅವರ ಭಾವನೆಯೇ ? ಆದುದರಿಂದ ನಾವು ಸಾಮಾನ್ಯ ಜನರ ಮನೆಗೆ ಹೋಗಿ ಹೇಗೆ ಆಮಂತ್ರಿಸುವುದು ? ಒಂದುವೇಳೆ ಮನೆಗೆ ಹೋಗಿ ಆಮಂತ್ರಿಸಿದರೆ ನಮ್ಮ ಘನ ಮರ್ಯಾದೆಯೇನಾದರೂ ಕಮ್ಮಿಯಾಗುವುದೋ ಎಂದು ತಿಳಿದು, ಸಂಪ್ರದಾಯವನ್ನು ಮುರಿದರೆಂದು ನಂಬಬಹುದೇ ? ಏನೇ ಆಗಲಿ ಮುರಿದ ಸಂಪ್ರದಾಯವನ್ನು ಸರಿಪಡಿಸುವರೇ ? ಇನ್ನು ಮುಂದೆಯಾದರೂ ಈ ರೀತಿಯ ಕಾರುಭಾರನ್ನು ನಿಲ್ಲಿಸಿ,

[15ನೇ ಪುಟ ನೋಡಿ]



ದೀಪಾವಳಿ

ದೀಪಾವಳಿ ಮೂರು ದಿನಗಳ ಹಬ್ಬ. ಆದರೆ ಹಿಂದಿನ ಎರಡು ದಿನಗಳನ್ನು ಕೂಡಿಸಿ ಐದು ದಿನಗಳಾಗಿ ಆಚರಿಸುವ ಸಂಪ್ರದಾಯವೂ ಇದೆ. ಅಶ್ವಯುಜ ಬಹುಳ ದ್ವಾದಶಿ ಅಥವಾ ವಸುದ್ವಾದಶಿ ಅಷ್ಟ ವಸುಗಳ ಪೂಜಾದಿನ. ಧನತ್ರಯೋದಶಿ ದೀಪ ಆರಾಧನೆಯ ಆರಂಭದ ದಿನ. ಸಂಪ್ರದಾಯ ನಿಷ್ಠರು ಆ ದಿನದಿಂದಲೇ ದೀಪಗಳನ್ನು ಉರಿಸಲು ತೊಡಗುತ್ತಾರೆ. ಈ ದಿನವನ್ನು ನೀರು ತುಂಬುವ ಹಬ್ಬವೆಂದೂ ಹೇಳುವರು. ಮರು ದಿನ ಎಣ್ಣೆಸ್ನಾನ [ಅಭ್ಯಂಜನ]ಕ್ಕಾಗಿ . ಹಂಡೆಗಳಿಗೆ ನೀರು ತುಂಬಿಡುತ್ತಾರೆ. ಹಂಡೆಯನ್ನು ಸುಣ್ಣಬಣ್ಣಗಳಿಂದ ಅಲಂಕರಿಸುತ್ತಾರೆ. ಚತುರ್ದಶಿಯ ಉಪಹಾರಕ್ಕೆಂದು ತಿಂಡಿ ವಗೈರೆಗಳ ಸಿದ್ಧತೆಯಲ್ಲಿರುವರು. ಹೊಸದಾಗಿ ವಿವಾಹವಾದ ಮಗಳು–ಅಳಿಯ ದೀಪಾವಳಿಗೆಂದು ಮಾವನ ಮನೆಗೆ ಬಂದಿಳಿಯುವರು. ಸಡಗರ ಸಂಭ್ರಮಗಳಿಂದ ದಿನ ಕಳೆಯುತ್ತಾರೆ. ದೀಪಾವಳಿ ಹಬ್ಬಕ್ಕಾಗಿ ಪಟಾಕಿಗಳನ್ನು ಖರೀದಿಸಿ ತರುತ್ತಾರೆ.

ನರಕಾಸುರನು ಲೋಕಕಂಟಕನಾಗಿದ್ದನು. ದೇವತೆಗಳನ್ನು ಹಿಂಸಿಸುತ್ತಿದ್ದನು. ಭೂಲೋಕದ ಅರಸರನ್ನು ಗೆದ್ದು ಅವರ ಹದಿನಾರು ಸಾವಿರ ಕನ್ಯೆಯರನ್ನು ಸೆರೆಯಲ್ಲಿರಿಸಿದ್ದನು. ಇಂದ್ರನ ಛತ್ರ ಚಾಮರಗಳು ಸಹ ಇವನ ವಶವಾಗಿದ್ದವು. ದೇವಮಾತೆಯಾದ ಅದಿತಿ ದೇವಿಯನ್ನು ಬಹಳ ಹಿಂಸಿಸಿ ಅವಳ ಕಿವಿ ಓಲೆಗಳನ್ನು ಅಪಹರಿಸಿದ್ದನು. ನರಕಾಸುರನ ಕಾಟ ತಾಳಲಾರದೆ ದೇವೇಂದ್ರನು ಕೃಷ್ಣನಲ್ಲಿ ಬಂದು ಅರಿಕೆಮಾಡಿಕೊಳ್ಳಲು ಶ್ರೀಕೃಷ್ಣನು ಸತ್ಯಭಾಮಾ ಸಮೇತನಾಗಿ ಗರುಡನನ್ನೇರಿ ಪ್ರಾಗ್ಜ್ಯೋತಿಷಪುರಕ್ಕೆ ಬಂದನು. ನಗರದ ರಕ್ಷಣೆಗಿದ್ದ ಗಿರಿದುರ್ಗ ಜಲದುರ್ಗ ಹಾಗೂ ಅಗ್ನಿವಾಯುದುರ್ಗಗಳನ್ನು ನಾಶಮಾಡಿ ಅನೇಕ ದೈತ್ಯವೀರರನ್ನು ಸಂಹರಿಸಿದನು. ವಿಷಯ ತಿಳಿದು ಕುಪಿತನಾದ ನರಕಾಸುರನು ಶತಘ್ನಿ ಎಂಬ ಗದೆಯನ್ನು ಹಿಡಿದು ತಾನೇ ಯುದ್ಧಕ್ಕೆ ಬಂದನು. ಕೃಷ್ಣನು ನರಕಾಸುರನೊಡನೆ ಹೋರಾಡಿ ಅಶ್ವಯುಜ ಬಹುಳ ಚತುರ್ದಶಿಯ ಕತ್ತಲಲ್ಲಿ ಆ ಅಸುರನನ್ನು ಸಂಹರಿಸಿದನು. ದೇವತೆಗಳು ಇದನ್ನು ಕಂಡು ಪುಷ್ಪವೃಷ್ಟಿ ಮಾಡಿದರು. ಆಗ ನರಕಾಸುರನ ತಾಯಿಯ ಮೊರೆಯಂತೆ ಕೃಷ್ಣ ನರಕಾಸುರನ ನೆನಪಿಗಾಗಿ ಹಬ್ಬ ಮಾಡುವ ಪರಿಪಾಠವನ್ನು ತಂದನೆನ್ನುತ್ತಾರೆ. ಈ ಸ್ಮರಣೆಯೇ ನರಕ ಚತುರ್ದಶಿ.

ಅಶ್ವಯುಜ ಬಹುಳ ಅಮಾವಸ್ಯೆಯನ್ನು ದೀವಳಿಗೆ ಅಮಾವಾಸ್ಯೆ ಎನ್ನುವರು. ದೀಪಾವಳಿ ಮತ್ತು ದೀವಳಿಗೆ ಎರಡೂ ಒಂದೇ ಹಬ್ಬದ ಎರಡು ಹೆಸರುಗಳು. ಸಾಮಾನ್ಯವಾಗಿ ಈ ಹಬ್ಬ ಅಕ್ಟೋಬರ್–ನವೆಂಬರ್ ತಿಂಗಳುಗಳಲ್ಲಿ ಬರುತ್ತದೆ. ಚಳಿಗಾಲದ ಆರಂಭಕಾಲವಾಗಿರುತ್ತದೆ. ಭಾರತದ ಎಲ್ಲೆಡೆ ದೀಪಾವಳಿ ಹಬ್ಬವನ್ನು ಆಚರಿಸಲಾಗುವುದು. ಕೃಷ್ಣಪಕ್ಷದ ಕೊನೆಯ ದಿನ ದೀಪಾವಳಿ ಬರುವುದರಿಂದ ದೀಪಾಲಂಕಾರದ ವಿಜೃಂಭಣೆ ಪ್ರಮುಖವಾಗಿ ತೋರುತ್ತದೆ. ದೀಪಾವಳಿ ದೀಪಗಳ ಹಬ್ಬ. ಮನಸ್ಸಿನಲ್ಲಿ, ಬದುಕಿನಲ್ಲಿ ಕತ್ತಲೆಯು ಹೋಗಿ ಬೆಳಕು ಮೂಡಲಿ ಎಂಬ ಬಯಕೆಗೆ ರೂಪ ಕೊಡುವ ಹಬ್ಬ. ದೀಪಾವಳಿಯಲ್ಲಿ ಐಶ್ವರ್ಯದೇವ ಲಕ್ಷ್ಮಿಯನ್ನು ಪೂಜಿಸಲಾಗುವುದು. ಧನಲಕ್ಷ್ಮೀ ಪೂಜೆ ಎಂದೇ ಇದಕ್ಕೆ ಹೆಸರು. ಲಕ್ಷ್ಮಿ ಬರಬೇಕಾದರೆ ಮನೆ ಚೊಕ್ಕಟವಾಗಿರಬೇಕು ಎಂಬ ನಂಬಿಕೆ ಇದೆ. ಅಮವಾಸ್ಯೆ ಕತ್ತಲು ಮಾನವರು ಹಚ್ಚುವ ದೀಪದಿಂದ ಇಲ್ಲವಾಗಿರುತ್ತದೆ.

ಲಕ್ಷ್ಮೀ ಪೂಜೆಗೆ ಮೊದಲು ಪೂಜಾಸ್ಥಳವನ್ನು ಶುದ್ಧಿಗೊಳಿಸಿ ರಂಗೋಲಿ ಇಡುವರು. ದೇವಿಗೆ ಹಣ್ಣು, ಕಾಯಿ ಮತ್ತು ಸಿಹಿ ತಿಂಡಿಗಳ ನೈವೇದ್ಯ ಮಾಡುವರು. ಬಳಿಕ ಮಕ್ಕಳು ಪಟಾಕಿಗಳನ್ನು ಹಚ್ಚಿ ಹರ್ಷಿಸುವರು.

ದೀಪಾವಳಿ ಮುಖ್ಯವಾಗಿ ಹಿಂದುಗಳ ಹಬ್ಬವಾದರೂ, ಈ ಹಬ್ಬ ಯಾವುದೇ ಒಂದು ಕೋಮಿನದಲ್ಲ. ಎಲ್ಲ ಜಾತಿ–ಮತಗಳ ಜನರೂ ದೀಪಾವಳಿಯನ್ನು ಆಚರಿಸುವರು.

ಬಲಿ ದಾನವರ ದೊರೆ. ಆದರೂ ಸನ್ಮಾರ್ಗದಲ್ಲಿದ್ದುಕೊಂಡು ಹಿಂಸೆಯನ್ನು ತ್ಯಜಿಸಿ ಒಳ್ಳೆಯ ಹೆಸರು ಸಂಪಾದಿಸಬೇಕೆಂದು ಹೇಳಿದ. ಶುಕ್ರಾಚಾರ್ಯರ ಸಲಹೆಯಂತೆ ಪ್ರಪಂಚದಲ್ಲಿ ಬಡತನವನ್ನು ನೀಗಲು ಯತ್ನಿಸಿದ. ಬಲಿಯ ಖ್ಯಾತಿ ಹದಿನಾಲ್ಕು ಲೋಕಗಳಿಗೂ ಹರಡಿತು.

ಶುಕ್ರಾಚಾರ್ಯರು ಬಲಿಯಿಂದ 99 ಅಶ್ವಮೇಧ ಯಾಗಗಳನ್ನು ಮಾಡಿಸಿದ್ದರು. ಇನ್ನೊಂದು ಯಾಗಕ್ಕೆ ಬಲಿ ಸಿದ್ಧತೆಗಳನ್ನು ಮಾಡತೊಡಗಿದ. ಆದರೆ ಆಗಲೇ ದೈತ್ಯರಿಗೆ ಅಹಂಕಾರ ಪ್ರಾಪ್ತವಾಗಿತ್ತು. ನೂರನೆಯ ಯಾಗ ಯಶಸ್ವಿಯಾಗಿ ಮಾಡಿ ಮುಗಿಸಿದರೆ ತಮ್ಮ ದೊರೆ ಬಲಿಗೆ ಇಂದ್ರಪದವಿ ಸ್ಥಿರವಾಗುತ್ತದೆಂದು ಅಹಂಕಾರದಿಂದ ಬೀಗಿದರು.

ಬಲಿಯು ನಡೆಸಿದ ನೂರನೆ ಅಶ್ವಮೇಧ ಯಾಗದ ಮುಕ್ತಾಯದ ಹಂತ ತಲಪಿತ್ತು. ಆಗ ಯಾಗ ಮಂಟಪವನ್ನು ಅದಿತಿಯ ಮಗನಾಗಿ ಅವತರಿಸಿದ್ದ ವಿಷ್ಣುವು ವಾಮನನಾಗಿ

ಪ್ರವೇಶಿಸಿ ಬಲಿಯಲ್ಲಿ ದಾನ ಬೇಡಿದ. ಬಲಿ ವಾಮನನಿಗೆ ದಾನ ಕೊಡಲು ಒಪ್ಪಿದ. ಬಂದಿರುವವನು ಮಹಾವಿಷ್ಣು ಎಂದು ಶುಕ್ರಾಚಾರ್ಯರು ಬಲಿಯನ್ನೆಚ್ಚರಿಸಿದರೂ ಬಲಿ ಕೇಳಲಿಲ್ಲ. ವಾಮನನು ಬಲಿಯಲ್ಲಿ ಮೂರು ಹೆಜ್ಜೆ ಭೂಮಿಯನ್ನು ಬೇಡಿದ. ಬಲಿಗೆ ಇದೇನು ಮಹಾ ಎನಿಸಿತು. ಆದರೆ ವಾಮನಾವತಾರಿ ವಿಷ್ಣುವು ತನ್ನ ಒಂದು ಹೆಜ್ಜೆಯಿಂದ ಇಡೀ ಭೂಲೋಕ ಮತ್ತು ಪಾತಾಳವನ್ನು ಇನ್ನೊಂದು ಹೆಜ್ಜೆಯಿಂದ ಸ್ವರ್ಗಲೋಕವನ್ನು ಆಳೆದ. ವಾಮನನು ತ್ರಿವಿಕ್ರಮನಾಗಿ ಬೆಳೆದಿದ್ದ. ಆಗ ಬಲಿಯು ತನ್ನ ವಾಗ್ದಾನವನ್ನು ಪೂರೈಸಲು ವಾಮನನಿಗೆ "ನಿನ್ನ ಮೂರನೆಯ ಹೆಜ್ಜೆಯನ್ನು ನನ್ನ ತಲೆಯ ಮೇಲಿಡು" ಎಂದು ವಿನೀತನಾಗಿ ಹೇಳಿದ. ಮಹಾವಿಷ್ಣುವು ತನ್ನ ಮೂರನೆಯ ಹೆಜ್ಜೆಯನ್ನು ಬಲಿಯ ತಲೆಯ ಮೇಲಿರಿಸಿ ಅವನನ್ನು ಪಾತಾಳಕ್ಕೆ ಮೆಟ್ಟಿದ.

ಬಳಿಕ ವಿಷ್ಣುವು, "ಬಲಿ ಚಕ್ರವರ್ತಿ ನೀನು ಮಹಾದಾನಿ, ಸತ್ಯವಂತ. ನೀನು ಮಾಡಿದ ಈ ದಾನದಿಂದ ಸಂತುಷ್ಟನಾಗಿದ್ದೇನೆ. ನೀನು ಪಾತಾಳಕ್ಕೆ ಹೋಗು. ಆ ಲೋಕದಲ್ಲಿ ವಾಸವಾಗಿರುವ ಅರಮನೆಯನ್ನು ನಾನು ಕಾಯ್ದುಕೊಂಡಿರುತ್ತೇನೆ. ನಿನ್ನಗಿನ್ನೇನು ವರಬೇಕೋ ಕೇಳಿಕೊ" ಎಂದನು.

ಆಗ ಬಲಿಯು, "ಭಗವಂತ, ನನ್ನ ಕೋಟೆಯನ್ನು ಕಾಯ್ದುಕೊಂಡಿರುತ್ತೇನೆ ಎಂದು ನೀನು ಹೇಳಿದ ಮೇಲೆ ಪ್ರತಿನಿತ್ಯವೂ ನಾನು ನಿನ್ನನ್ನು ನೋಡಿಕೊಂಡಿರುವ ಸೌಭಾಗ್ಯ ಕಲ್ಪಿಸಿರುವೆ. ನನಗಿನ್ನೇನು ಬೇಕು ? ಆದರೆ ನಾನು ಭೂಲೋಕವನ್ನು ಮರೆಯಲಾರೆ. ವರ್ಷದಲ್ಲಿ ಒಮ್ಮೆಯಾದರೂ ನಾನು ಭೂಮಿಗೆ ಬಂದು ಇಲ್ಲಿನ ವೈಭವವನ್ನು ಕಾಣುವ ಅವಕಾಶವನ್ನು ಕಲ್ಪಿಸು" ಎಂದು ಕೇಳಿದ.

ವಾಮನನು ಬಲಿಯ ಕೋರಿಕೆಯನ್ನೀಡೇರಿಸುತ್ತಾ, ಬಲಿ ಚಕ್ರವರ್ತಿ, ಯಾವ ಈ ದಿನ ನಿನ್ನೆಲ್ಲ ಸಂಪತ್ತು ರಾಜ್ಯಗಳನ್ನು ನನಗೆ ದಾನವಾಗಿ ಕೊಟ್ಟೆಯೊ ಆ ದಿನವನ್ನು ಪ್ರತಿವರ್ಷ ಭೂಲೋಕದಲ್ಲಿ ಜನರು ಹಗಲು ರಾತ್ರಿ ದೀಪಗಳ ಮಧ್ಯೆ ಸಂಭ್ರಮದಿಂದ ಆಚರಿಸುವಂತಾಗಲಿ. ನೀನು ಈ ಭೂ ವೈಭವವನ್ನು ಕಾಣುವಿಯಂತೆ" ಎಂದು ಹೇಳಿದ.

ಭಾರತದಲ್ಲಿ ಹಿಂದುಗಳು ಪ್ರತಿವರ್ಷ ಕಾರ್ತಿಕ ಮಾಸದ ಶುಕ್ಲಪಾಡ್ಯದ ದಿನವನ್ನು ಬಲಿಯು ಹರಿಗೆ ದಾನ ಕೊಟ್ಟ ದಿನವಾಗಿ ಬಲಿಪಾಡ್ಯಮಿ ಎಂದು ಆಚರಿಸುತ್ತಾರೆ.

ಶ್ರೀರಾಮಚಂದ್ರನು ಆಯೋಧ್ಯೆಯಲ್ಲಿ ಪಟ್ಟಾಭಿಷಿಕ್ತನಾದುದು ಬಲಿಪಾಡ್ಯಮಿಯ ದಿನ. ಶ್ರೀಕೃಷ್ಣನು ಗೋವರ್ಧನ ಗಿರಿಯನ್ನು ಕಿರುಬೆರಳಿನಿಂದ ಎತ್ತಿ ನಂದಗೋಪಾದಿಗಳನ್ನು ದೇವತೆಗಳು ಸುರಿಸಿದ ಮಳೆಯಿಂದ ರಕ್ಷಿಸಿದ ದಿನವೂ ಇದೇ ಆಗಿದೆ.

ಬಲಿಪಾಡ್ಯಮಿ ಒಂದು ಶುಭದಿನವೆಂಬ ನಂಬಿಕೆ ಇದೆ. ಆ ದಿನ ಸಂಜೆ ಸ್ತ್ರೀಯರು ಬಲೀಂದ್ರನ ಪೂಜೆ ಮಾಡುತ್ತಾರೆ. ಲಕ್ಷ್ಮಿಗೆ ವಿಶೇಷ ಪೂಜೆ ಸಲ್ಲಿಸುತ್ತಾರೆ. ಹೊನ್ನು ಹೊನ್ನು ಎಂದು ಹೂವುಗಳನ್ನು ಮನೆ ತುಂಬಾ ಹಾಕುವರು. ರಾತ್ರಿ ದೀಪಾಲಂಕಾರ, ಬಗೆ ಬಗೆಯ ಪಟಾಕಿ, ಮತಾಪು, ಹೂವಿನ ಕುಂಡಗಳನ್ನು ಹೊತ್ತಿಸಿ ನಲಿಯುತ್ತಾರೆ.

ದೀಪಾವಳಿ ಹಬ್ಬದ ಸಡಗರ ಇಲ್ಲಿಗೇ ಮುಗಿಯುವುದಿಲ್ಲ. ಕಾರ್ತಿಕ ಶುಕ್ಲ ದ್ವಾದಶಿಯಂದು ತುಳಸಿ ಲಗ್ನ ಅಥವಾ ಉತ್ಥಾನದ್ವಾದಶಿ ಎಂದು ಆಚರಿಸುತ್ತಾರೆ. ಅಂದು ಮನೆ ಮುಂದಿನ ತುಳಸಿಕಟ್ಟೆಯನ್ನು ಸಿಂಗರಿಸುವರು. ಪುರೋಹಿತರಿಂದ ಮಂತ್ರ ಹೇಳಿಸಿ ವಿವಾಹ ಮಾಡುತ್ತಾರೆ. ತುಳಸಿ ಕಟ್ಟೆಗೆ ಕಬ್ಬಿನ ಚಪ್ಪರ ಹಾಕಿ, ಹೂವು–ನೆಲ್ಲಿಹರಿಗಳಿಂದ ಸಿಂಗರಿಸುವರು. ಸಂಜೆ ಮುತ್ತೈದೆಯರನ್ನು ಕರೆದು ತುಳಸಿಗೆ ಆರತಿ ಮಾಡಿ ಪ್ರಸಾದ ವಿತರಿಸುವರು. ದೀಪಾಲಂಕಾರ ಎಂದಿನಂತೆ ಇರುತ್ತದೆ. ಮಕ್ಕಳು ಪಟಾಕಿ ಹಚ್ಚಿ ಸಂತೋಷಿಸುವ ಉದ್ಥಾನ ದ್ವಾದಶಿಯಂದು ಹಬ್ಬದಡಿಗೆ ಮಾಡುವರು. ಎಲ್ಲರಿಗೂ ಸಿಹಿ ತಿಂಡಿ ಹಂಚಿ ಒಬ್ಬರಿಗೊಬ್ಬರು ದೀಪಾವಳಿಯ ಶುಭಾಶಯ ಹೇಳುವರು.

ಉಳುಕು ಸಂಭವಿಸಿದಾಗ

ಬರ್ಫದ ನೀರಿನಲ್ಲಿ [Ice water] ಬಟ್ಟೆ ನೆನೆಯಿಸಿ ಹಾನಿಯಾದ ಜಾಗಕ್ಕೆ ಪ್ರಯೋಗಿಸಿ ಬ್ಯಾಂಡೇಜು ಕಟ್ಟುವುದರಿಂದ ಬಹಳ ಪ್ರಯೋಜನವಾಗುತ್ತದೆ. ತೆಂಗಿನೆಣ್ಣೆಯೊಡನೆ ಬೆಳ್ಳುಳ್ಳಿಯನ್ನು ಜಜ್ಜಿ ಈ ಎಣ್ಣೆಯನ್ನು ಹಾನಿಯಾದ ಸ್ಥಳಕ್ಕೆ ಲೇಪಿಸುವುದು. ಬೆಳ್ಳುಳ್ಳಿಯ ಎಣ್ಣೆಯನ್ನು ಪ್ರಯೋಗಿಸುವ ಮುಂಚೆ ಉಳುಕಿರುವ ಜಾಗಕ್ಕೆ ಬಿಸಿ ನೀರಿನ ಶಾಖ ಕೊಟ್ಟರೆ ಒಳ್ಳೆಯದು. ಕರಿಮೆಣಸಿನ ಬಳ್ಳಿಯ [ಕಾಳು ಮೆಣಸಿನ] ಒಂದೊಂದು ಎಲೆಯ ಒಳಭಾಗಕ್ಕೆ ತೆಂಗಿನೆಣ್ಣೆ [ಕೊಬ್ಬರಿಎಣ್ಣೆ] ಹಚ್ಚಿ ಆ ಎಲೆಗಳ ಹೊರಭಾಗಗಳನ್ನು ಒಂದೊಂದಾಗಿ ಉರಿ ಕೆಂಡದ ಮೇಲಿಟ್ಟು ಕಾಯಿಸಿ, ಏಟು ತಗಲಿದ ಅಂಗಗಳಿಗೆ ಬಿಸಿ ಎಣ್ಣೆಯಿರುವ ಎಲೆಯ ಒಳಭಾಗವನ್ನು ಪ್ರಯೋಗಿಸುವುದು.

—ಸಂಗ್ರಹ

ಬೆಂಗಳೂರಿನಲ್ಲಿ ಕೈಲ್‌ಪೊಳ್ದ್ ಹಬ್ಬ ಆಚರಣೆ

ಬೆಂಗಳೂರಿನ ಆಸುಪಾಸಿನಲ್ಲಿ ವಾಸವಾಗಿರತಕ್ಕ ಕೊಡಗು ಮತ್ತು ದ. ಕ. ಜಿಲ್ಲಾ ಗೌಡಭಾಂದವರು ವಾರ್ಷಿಕ ಮಹಾಸಭೆ ಮತ್ತು ಕೈಲ್‌ಪೊಳ್ದ್ ಹಬ್ಬವನ್ನು ದಿನಾಂಕ 11-10-98ನೇ ಭಾನುವಾರ ಬೆಂಗಳೂರು ಮಹಾನಗರ ಪಾಲಿಕೆಯ ಭವನ, ರಾಜಾಜಿನಗರ ಇಲ್ಲಿ ನಡೆಯಿತು.

ಸಮಾಜದ ನೂತನ ಅಧ್ಯಕ್ಷರಾದ ಶ್ರೀ ದಂಬೆಕೋಡಿ ಆನಂದರವರ ಘನ ಅಧ್ಯಕ್ಷತೆಯಲ್ಲಿ ನಡೆದ ಈ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಕೊಡಗು ಪ್ರಜಾವೇದಿಕೆಯ ಪ್ರಧಾನ ಸಂಚಾಲಕರಾದ ಸಂಪಾಜೆಯ ಎನ್.ಎಸ್. ದೇವಿಪ್ರಸಾದ್ ರವರು, ಜಿಲ್ಲಾ ಗ್ರಾಹಕರ ವೇದಿಕೆ, ಮಡಿಕೇರಿ ಇವರ ಸದಸ್ಯರು ಹಾಗೂ ಖ್ಯಾತ ನ್ಯಾಯವಾದಿ ಪಾಣತ್ತಲೆ ಗೋಪಾಲರವರು, ಬೆಂಗಳೂರು ವಿ.ವಿ.ಪುರಂನ ಕಾನೂನು ವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿರುವ ಶ್ರೀಮತಿ ಪೊನ್ನೇಟಿ ಕೆ. ಹಿಮಾಲಾಕ್ಷಿ ರವರು ಹಾಗೂ ಉಡುಪಿಯ ಬಾಲಕಿಯರ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಕೆ. ಕೆ. ಹಂಸಾವತಿಯವರು ಆಗಮಿಸಿದ್ದರು.

ಸಮಾರಂಭದಲ್ಲಿ ಕ್ರೀಡಾಕೂಟದ ವಿಜೇತರಿಗೆ ಬಹುಮಾನವನ್ನು ಮತ್ತು ರಾಷ್ಟ್ರ ಹಾಗೂ ರಾಜ್ಯಮಟ್ಟದ ಪ್ರತಿಭೆಗಳಿಗೆ ಸನ್ಮಾನವನ್ನು ಸಹ ಮಾಡಲಾಯಿತು. ಏಕಲವ್ಯ ಪ್ರಶಸ್ತಿ ಗಳಿಸಿದ ಶ್ರೀ ಕೆ.ಕೆ. ಶ್ರೀಧರಗೌಡರವರು ಗೌಡ ಯುವ ಸಂಘದ ವಾರ್ಷಿಕ ಕ್ರೀಡಾಕೂಟವನ್ನು ದಿನಾಂಕ 1-10-98ರಂದು ಉದ್ಘಾಟಿಸಿದರು. ಗೌಡ ಯುವಕ ಸಂಘದ ನೇತೃತ್ವವನ್ನು ಶ್ರೀ ತೆಕ್ಕಡೆ ಕಾವೇರಿಯಪ್ಪ ಮತ್ತು ನಂಗಾರು ನಿಂಗರಾಜು ವಹಿಸಿದ್ದರಲ್ಲದೆ ಅರೆಭಾಷಿಕ ಗೌಡ ಜನಾಂಗದವರು ಜೊತೆ ಸೇರಿ ಕ್ರೀಡಾ ಕೂಟವನ್ನು ನಡೆಸಿದ್ದು ಅಭಿನಂದನಾರ್ಹ. ಹಾಗೂ ಸ್ತುತ್ಯಾರ್ಹದ ಮತ್ತು ಐಕ್ಯತೆಯ ಕುರುಹು ಸಹ ಇದಾಗಿದೆ.

[12ನೇ ಪುಟದಿಂದ]

ತಿರಸ್ಕರಿಸಿದ ಜನಾಂಗ

ಜನಾಂಗವನ್ನು ನಾವೆಲ್ಲ ಒಂದೇ, ಬನ್ನಿ ಒಂದಾಗಿ ಸಾಗೋಣ, ಪ್ರಗತಿಯತ್ತ ಮುನ್ನುಗ್ಗೋಣವೆಂದು ಕರೆದೊಯ್ಯುವರೆ? ಕಾದು ನೋಡೋಣವೇ?

ಕೊನೆಯದಾಗಿ ಆಡಳಿತ ಮಂಡಳಿಯವರಲ್ಲಿ ನನ್ನ ವೈಯಕ್ತಿಕ ವಿನಂತಿ ಏನೆಂದರೆ, ಸಮಾಜದವರೆಂದರೆ ಸಮಾಜದ ಸೇವಕರೆಂಬುದು ನೆನಪಿನಲ್ಲಿಡಬೇಕಾದ ಅಂಶ ಒಂದು ವೇಳೆ ನಿಮ್ಮನ್ನು ಜನಾಂಗದವರು ನಮ್ಮ ಸಮಾಜದವರೆಂದು ಒಪ್ಪಿಕೊಂಡಿದ್ದರೆ ಈ ನಿಮ್ಮ ವರ್ತನೆ ಖಂಡನೀಯ. ಸಮಾಜದವರು ಸಮಾಜದ ಸೇವೆಗೆಂದೇ ಅಲ್ಲದೆ ಜನಾಂಗದ ಪುರೋಭಿವೃದ್ಧಿಗೆ ದುಡಿಯುವವರು ಆಗಿರಬೇಕು. ಜನಾಂಗದ ಕಷ್ಟ ಸುಖಗಳಲ್ಲಿ ಸ್ಪಂಧಿಸುವವರು ಆಗಬೇಕು. ಜನಾಂಗಕ್ಕೆ ಜನಾಂಗೀಯ ತೊಂದರೆ ಎದುರಾದಾಗ ಎದೆ ತಟ್ಟಿ ಮುಂದೆ ನಿಂತು ಹೋರಾಡುವವರಾಗಬೇಕು. ಪ್ರತಿವರ್ಷ ಜನಸಂಘಟನೆಯನ್ನು ಮಾಡಬೇಕು ನಮ್ಮ ಸಂಸ್ಕೃತಿ, ಸಂಪ್ರದಾಯ, ಆಚಾರ–ವಿಚಾರ, ಉಡುಗೆ–ತೊಡುಗೆ ಹಾಗೂ ಭಾಷೆಯನ್ನು ಸಂರಕ್ಷಿಸಬೇಕು. ಇದು ನಮ್ಮ ನಿಮ್ಮೆಲ್ಲರ ಧರ್ಮ ಹಾಗೂ ಕರ್ತವ್ಯವೂ ಸಹ ಹೌದು ಇಂತಹವರನ್ನು ಮಾತ್ರ 'ಸಮಾಜದವರು' ಎಂಬ ಪದದಿಂದ ನಾವು ಸಂಭೋದಿಸುವುದು. ಓದುಗರೇ ನೀವೇನನ್ನುತ್ತೀರಿ? ●

ಸಂಗಾತಿ ಪ್ರಶ್ನಾವಳಿ 3ಕ್ಕೆ ಪ್ರಶ್ನೆಗಳು

1. ಮಹಾರಾಜರುಗಳು ಬೇಟೆಯಾಡುವಾಗ ಒಯ್ಯುತ್ತಿದ್ದ, ಬೇಟೆಯ ತರಬೇತಿಯನ್ನೂ ನೀಡಿದ್ದಂಥ ಪ್ರಾಣಿ ಯಾವುದು?
2. ಭಿತ್ತಿಚಿತ್ರವನ್ನು ಯಾವುದರ ಮೇಲೆ ಬಿಡಿಸಲಾಗುತ್ತದೆ?
3. ದಶರಥ ಮಹಾರಾಜರ ಧರ್ಮಪತ್ನಿ ಹಾಗೂ ರಾಮನ ಮಾತೆ ಯಾರು?
4. ಕುದಿಯುವ ನೀರಿನಿಂದ ತೀವ್ರ ಸುಟ್ಟ ಗಾಯವು ಉಂಟಾಗುತ್ತದೋ ಅಥವಾ ಹಬೆಯಿಂದಲೋ?
5. ಭಾರತದ ಪ್ರಥಮ ಗಗನ ಯಾತ್ರಿ ರಾಕೇಶ್ ಶರ್ಮ ರವರು ಯಾವ ಇಸವಿಯಲ್ಲಿ ಅಂತರಿಕ್ಷಯಾನ ಮಾಡಿದರು?

ಪ್ರಶ್ನಾವಳಿ 2ಕ್ಕೆ ಉತ್ತರ

1. ಇಂದಿರಾಗಾಂಧಿ ಸಮಾಧಿಗೆ
2. ನೆದರ್‌ಲ್ಯಾಂಡ್
3. ಸಿಕಂದರ್
4. ವಿಶಾಖಪಟ್ಟಣ
5. ರಾಜ್ಯದ ರಾಜ್ಯಪಾಲ

ಪ್ರಶ್ನಾವಳಿ 2ರ ಬಹುಮಾನ ವಿಜೇತರು

ವಿಜು ಪೊನ್ನಪ್ಪ, ಬೆಂಗಳೂರು.

ವಿ. ಸೂ. : ಪ್ರಶ್ನಾವಳಿಯಲ್ಲಿ ಪ್ರಕಟಗೊಂಡ ಪ್ರಶ್ನೆಗಳಿಗೆ ನಿಮ್ಮ ಉತ್ತರವನ್ನು ನವಂಬರ್ 10ರೊಳಗೆ ಕಳುಹಿಸುವುದು.

ನಿಮ್ಮ ಪತ್ರಗಳು

ಛಲ ಬೆಳ್ಸಿಕಣಕು

ಮಾನ್ಯರೆ,

ಗೌಡ ಜನಾಂಗದ ಪ್ರಮುಖ ಪಾಕ್ಷಿಕ ಪತ್ರಿಕೆ ಸುರಾಗಿ ಎರಡ್‌ನೆ ವರ್ಷಕ್ಕೆ ಕಾಲ್ ಮಡ್ಗಿಟ್ಟ್. ಇದರ ಬಗ್ಗೆ ವಿಮರ್ಶೆ ಮಾಡ್ವನ ನಮ್ಮ ಜನಾಂಗಕ್ಕೆ ಗೌಡ ಸಾಂಸ್ಕೃತಿಕ ಅಕಾಡಮಿ ಮತ್ತೆ ಮಹಿಳಾ ಒಕ್ಕೂಟ ರಚನೆಗೆ ಪ್ರಮುಖ ಪಾತ್ರ ವಹಿಸಿ ಜನಾಂಗಕ್ಕೆ ದಾರಿ ದೀಪವಾಗುಟ್ಟ್ ತೇಳ್ರೆ ತಪ್ಪಾಕಿಲೆ. ಅಂದರೆ ಇದರ ಬೆಳವಣಿಗೆ ನೋಡ್ವಾಕನೆ ನಂಗೆ ತುಂಬಾ ಆಶ್ಚರ್ಯ ಮತ್ತೆ ಬೇಜಾರಾದ ಸಂಗತಿ. ಈ ಕೊಡಗು ಸಂಗಾತಿಲಿ ಅಡಕವಾಗುಟು. ಒಂದು ಪತ್ರಿಕೆ ಸರೀಸಾಗಿ ನಡ್ಸಂಡ್ ಹೋಕುತಾದರೆ ಕಮ್ಮಿ ತೇಳ್ರೆ 3000 ಪ್ರತಿ ಖರ್ಚಾ ಆಕು. ಈ ಪತ್ರಿಕೆ 1500 ಪ್ರತಿ ಮಾತ್ರ ಕಷ್ಟಲಿ ಹೋಗ್ತಾ ಉಟ್ಟಂತೇಳ್ರೆ. ನೀವೇ ಗ್ಯಾನ ಮಾಡಿ, ಈ ಪತ್ರಿಕೆ ನಡಸೊವು ಎಷ್ಟ್ ಕಷ್ಟಲಿ ಇರುವ್ರೊತ. ಇದ್ಕೆ ಹಿಂದೆ ವಣಿರೆಭಾಷೆ ಪತ್ರಿಕೆಗ ಹಿಂಗಾಗಿ ನೆಲ ಕಚ್ಚಿಟು ತೇಳ್ರೆ ತಪ್ಪಾಕಿಲೆ.

ಈವರೆಗೆ ಕಳ್ದದನ ಮೆಲ್ಕ್ ಹಾಕದೆ ಇನ್ನ್ ಮುಂದೆ ನಾವೆಲ್ಲಾ ಅಂದರೆ ಗೌಡ ಸಜ್ಜನ ಬಂಧುಗ ಎಲ್ಲಾ ಸೇರಿಕಂಡ್ ಈ ಪತ್ರಿಕೆನ ಉಳ್ಸಿ ಬೆಳ್ಸಕು. ಇದ್ಕೆ ನಾವು ಏನು ಮಾಡಕು ತೇಳ್ರೆ ಪತ್ರಿಕೆನ ಇನ್ನೊಬ್ಬನಲ್ಲಿಂದ ಕೇಳಿ ಓದುದಕ್ಕಿಂತ ನಮ್ಮ ಜನಾಂಗದ ಅಭಿವೃದ್ಧಿಗಾಗಿ ಹಣ ಕೊಟ್ಟ್ ತಕ್ಕಂಡ್ ಓದುದರ್ನ ಬೆಳ್ಸಿಕಣಕು. ಒಂದು ವರ್ಷಕ್ಕೆ ರೂಪಾಯಿ 120-00 ನಮಗೆ ದೊಡ್ಡ ಹೊರೆ ಆಕಿಲೆ. ಇದ್ ನಮ್ಮ ಜನಾಂಗಕ್ಕೆ ತ್ಯಾಗಂತ ಗ್ಯಾನ ಮಾಡಿಕಣಿ. ಹಂಗೆನೆ ಪ್ರತಿ ಒಬ್ಬ ಪತ್ರಿಕೆ ಓದವು ನಿಮ್ಮ ಅಕ್ಕ ಪಕ್ಕದವ್ಕೆ ಮನವರಿಕೆ ಮಾಡಿ ನಿಮ್ಮಿಂದ ಎರಡ್ ಪ್ರತಿಗಳನ್ನಾದರ್ ತರ್ಸಿಕೆ ಪ್ರಯತ್ನ ಪಡಕು. ಆಗ 4200 ಪ್ರತಿಯಾರ್ ಖರ್ಚ್ ಆದೆ. ಹಿಂಗಾದರ್ ಈ ಪತ್ರಿಕೆನ ಉಳ್ಸರ್. ಪ್ರತಿ ಗೌಡ ಮನೆಗಳಿಗೆ ಕೊಡಗು ಸಂಗಾತಿ ತರ್ಸಿಸಿಕೆ ಸಹಕಾರ ಮಾಡಕುತಾ ನಮ್ಮ ಜನಾಂಗದ ಸಜ್ಜನ ಬಂಧು ಗಳ್ಲಿ ಕೈ ಮುಗ್ದ್ ಕೇಳಿಕಣೆ.

ಇಂತ ಕ್ರಾಂತಿಕಾರಿ ಮನೋಭಾವ ಬೆಳ್ಸಿಕಂಡರೆ ಬಲಾಡ್ಯರ ಹಿಯ್ಯಾಳಿಕೆಗೆ ಒಳಗಾದ ನಮ್ಮ ಜನಾಂಗ ಪ್ರಥಮವಾಗಿ ತಲೆ ಎತ್ತಿ ನಿಲ್ಲುದರ್ಲಿ ಸಂಶಯ ಇಲ್ಲೆ. ಸಾವ್ ಮನಸ್ ಮಾಡ್ರೆ ಏನ್ ಬೇಕಾದರ್ ಸಾಧಿಸರ್. ಯಾವುದ್ ಆದುಲೇತ ಹೇಳುವೆನೋ ಅದರ್ನೆ ಮಾಡಿ ತೋರ್‍ಸುವ ಛಲ ಬೆಳ್ಸಿಕಣಕು.

ನಮ್ಮ ಯುವ ಜನರೇ 'ಎದ್ದೇಳಿ ಗುರಿ ಮುಟ್ಟುವವರೆಗೆ' ನಮ್ಮ ಜನಾಂಗದ ಏಳ್ಗೆಗಾಗಿ ಪ್ರಯತ್ನ ಪಡೊನೊ. ಸಾಧಿಸಿದರೆ ಸಬಳವನ್ನು ಕೂಡ ನುಂಗಬಹುದು ಎಂಬ ಗಾದೆ ನಾಕ್‌ಟ್ಟ್. ಈ ಪತ್ರಿಕೆನ ಕೈ ಬಿಟ್ಟರೆ ಇನ್ನ್ ಮುಂದಕ್ಕೆ ನಮ್ಮ ಜನಾಂಗದ ಪತ್ರಿಕೆ ಹುಟ್ಟಿಕೆ ಸಾಧ್ಯ ಇಲ್ಲೆ ತೇಳುದರ್ನ ಮರಿಬಡಿ.

○ ಕೊಂಪುಳೀರ ಗಣೇಶ್ ಬೋಪಯ್ಯ
ಐಕೊಳ.

ಹೆಚ್ಚಾಗಿ ಮೂಡಿಬರಲಿ

ಮಾನ್ಯರೇ,

ಸಂಚಿಕೆ 14, [ಜುಲೈ 15-30] ರಲ್ಲಿ ಬಿ. ಆರ್. ಜೋಯಪ್ಪನವರ 'ನಿಮ್ಮ ಕೋಳಿಗೆ ಎರ್ಡ್ ತಲೆ ಉಟ್ಟಾ' ಉತ್ತಮವಾಗಿ ಮೂಡಿಬಂದಿದೆ. ಕೊಡಗಿನ ಮಧ್ಯಮವರ್ಗದ ಮನೆಗಳಲ್ಲಿನ ನಿತ್ಯ ನೂತನ ಘಟನೆಯ ಕ್ಷಣಿಕ ದರ್ಶನ ನಮ್ಮ ಸುಂದರ ನಾಡಿನ ಗಂಧಲೇಪನಭರಿತವಾಗಿ, ಬಹಳ ಸೊಗಸಾಗಿ ಮೂಡಿಬಂದಿದೆ.

ಹಾಗೆಯೇ ಸಂಚಿಕೆ 18, [ಸಪ್ಟಂಬರ್ 15-30]ರಲ್ಲಿ ಹೇಮ ಕುಂಜಪ್ಪನವರ 'ಹುಲಿ ಭೇಟಿ' ಓದುಗರನ್ನು ಕೊಡಗಿನ ಅಭಯಾರಣ್ಯದೊಳಗೆ ಕೊಂಡೊಯ್ದು ಹೆಬ್ಬುಲಿಯ ದರ್ಶನ ಮಾಡಿಸಿ, ಸುರಕ್ಷಿತವಾಗಿ ವಾಪಾಸು ಮನೆಗೆ ಕರೆತರುವಂತಿದೆ. ಲೇಖನ ಓದಿ ಮುಗಿಸುವಷ್ಟರಲ್ಲಿ ಹೃದಯದ ಬಡಿತ ಹೆಚ್ಚಾಗುವುದಂತೂ ಖಂಡಿತ. ಇಂತಹ ಲೇಖನಗಳು ಹೆಚ್ಚು ಹೆಚ್ಚಾಗಿ ಮೂಡಿಬರಲಿ.

● ಎಡಿಕೇರಿ ಸುದರ್ಶನ ಮುತ್ತು
ಮನೆಯುವರು.

ಅ ರೆ ಭಾ ಷೆ

ಶ್ರೀ ವೆಂಕಟರಮಣನು
ತನ್ನ ಮಧುರವಾದ
ನುಡಿಯಿಂದ
ಭಕ್ತನೋರ್ವನ
ಕನಸಿನಲ್ಲಿ ಬಂದು
ಆಶೀರ್ವದಿಸಿದ
ಭಾಷೆಯೇ
ಅ ರೆ ಭಾ ಷೆ !

○ ನಂಗಾರು ಕಿರಣ್ ಕೀರ್ತಿಪ್ರಸಾದ್
ಯಡವಾರೆ.

ಅರೆ ಭಾಷಿಕ ವಿಭಾಗ

ಧಾರವಾಹಿ-14

ಮೂಲಕಥೆ : ಅಶ್ವಥಿ ಅರವಿಂದ್
ಅರೆಭಾಷೆಗೆ : ಎಂ.ಇ. ಮುಹಮ್ಮದ್

ಕರಿ ಚಿನ್ನ

ಕಳ್ದ ಸಂಚಿಕೆಲಿ......... ..

ರಂಜನ್‌ನ ವಿಸ್ಯ ಹೇಳಿಕೆತ ಬಂದ ಜೀವನ್‌ಗೂ ಅಪ್ಪ ದೇವಯ್ಯಂಗೂ ಬಾರೀ ವಾದ ನಡ್ವದೆ. ಅಷ್ಟೊತ್ತಿಗೆ ಮನೆ ಆಳ್ ಬಂದ್ ಮನೆಯವರ್ನೆಲ್ಲಾ ಆಶ್ಚರ್ಯಲಿ ಕರ್ದ್ ಫ್ಯಾಕ್ಟ್ ಮಾದಯ್ಯ ಅಂಟಸಿದ್ದ ಪೋಸ್ಟರ್‌ನ ತೋರ್ಸಿದೆ. ಆ ಪೋಸ್ಟರ್‌ಲಿ ಬರ್ದ ವಿಸ್ಯನ ಆಳ್ ಕುಟ್ಟ ಓದಿ ಹೇಳ್ಯಾಕನ ದೇವಯ್ಯನ ಹೆಣ್ಣ್ ಸುಸ್ತಾಗಿ ಕುದ್ದೊದೆ. ಆಗ ದೇವಯ್ಯ ಹೆಣ್ಣ್ ಮುತ್ತಕ್ಕನ ಕರ್ದ್ ಜೀವನ್ ಹೇಳ್ದಂಗೆ ಗೌರನ ರಂಜುಗೆ ಮೊದ್ವೆ ಮಾಡ್ಕಣದೋದ್ರೆ ನಮ್ಮ ಮರ್ಯಾದೆಲ್ಲಾ ಹರಾಜಾದೆತೇಳಿ ಮೊದ್ವೆಗೆ ಒಪ್ಪಿಕಂಡದೆ.

ಮುಂದೆ ಓದಿ............

ದೇವಯ್ಯನ ಮಾತ್ ಕೇಳಿ ಜೀವನ್ ಮತ್ತೆ ಮುತ್ತಕ್ಕ ಬಾಳ ಕುಸಿಲಿ ಬಾಯಿ ಬುಟ್ಟ್‌ಕಂಡ್ ನಿತ್ತ್‌ಬುಟ್ಟೊ.

'ನಿಜವಾಗ್ಲೂ ಹೇಳ್ತ ಒಳ್ರಾ ?'

ಮುತ್ತಕ್ಕ ಸಂಶಯಲೇ ಕೇಳ್ತ್.

'ಇಂತ ವಿಚಾರಲಿ ಯಾರಾದ್ರು ಸುಳ್ಳ್ ಹೇಳಿವೆನಾ ?'

ಈಗ ಡ್ಯಾಡಿದ್ ಮಾತ್ ನಿಜಾಂತ ಆತ್ ಜೀವನ್‌ಗೆ. ಅಂವ ರಂಜನ್‌ದ್ ಕ್ಯಾಂಬರೆಗೆ ಓಡ್ತ್.

'ಡ್ಯಾಡಿ ಒಪ್ಪಿದೊ...ಅಣ್ಣಾ...ನಿಂಗೆ ಗೌರನ ಮೊದ್ವೆ ಮಾಡ್ಸಿಕೆ ಡ್ಯಾಡಿ ಒಪ್ಪಿದೊ'

ಜೀವನ್ ರಂಜನ್‌ನ ತಬ್ಬಿಹಿಡ್ತ್.

'ಬುಡ್ರಾ...'

ಜೀವನ್‌ನ ಹಿಡ್‌ತಂದ ತಪ್ಪಿಸ್ಕಂಡ್ ಡೈನಿಂಗ್‌ಹಾಲ್‌ಗೆ ಹೋತ್.

'ಬೈನೆ ಮರ್‌ದಂಗೆ ಬೆಳವ್ರು ತಲೆಲಿ ಮೂರ್‌ಕಾಸ್‌ನ ಬುದ್ಧಿ ಇಲ್ಲೆ, ನಾನ್ ಅವಂಗೆ ಮಂತ್ರಿದ್ ಮಗಳ್ನ ತಾಕೂಂತಿದ್ದೆ ಆದರೆ ಆ ನಾಲಾಯಕ್‌ಗೆ ಅದೃಷ್ಟ ಬೇಕಲೆ ! ಇನ್ನೀಗ ನಾಡ್‌ಕೊಲ್ಲಿ ಮಾದಪ್ಪನ ಮಗಳ ಪೊರ್ಲ್ ನೋಡಿಕಂಡ್ ಕುದ್ದ್‌ಕಂಡಿರ್‌ಲ್ಲಿ.'

ದೇವಯ್ಯ ಅಷ್ಟ್ ಹೇಳಿ ಬಾಯಿ ಮುಚ್ಚಿದಂಗೆ ಜೀವನ್ ಹೇಳ್ತ್.

'ಡ್ಯಾಡೀ ನೀನ್ ಗ್ಯಾನ ಮಾಡ್ದಂಗೆ ಮಂತ್ರಿಗ ಇಲ್ಲೆ. ಮಂತ್ರಿಗಳಿಗೂ ಈಗ ಗ್ರಾಚಾರ ಬರ್‌ತ ಉಟ್ಟ್. ಅವು ಉಚ್ಚೆ ಹೊಯ್ಯಕ್ಕೂ ಹಿಂದೆಮುಂದೆ ಮೂರ್‌ನಾಕ್ ಪೊಲೀಸ್‌ಗ ಇರೊಕು ಗೊತ್ತಾ ? ಅದ್‌ಕಿಂತ M.L.A. ಆದೇ ಒಳ್ಳೆದ್. ಅದ್ಯಾವ್‌ದೋ ಒಂದ್ ಪೇಟೆದ್ ಒಬ್ಬ ಎಂ.ಎಲ್.ಎ. ಹಿಂದೆ ರಾಜ್ಯದ ಹೋಂ ಮಿನಿಸ್ಟರ್‌ನೇ ಬುಟ್ಟತ್‌ಲೆಗಡ '

'ಇನ್ನೀಗ ಮಂತ್ರಿದ್ ಮಗಳೊ ಎಂ.ಎಲ್.ಎ ದ್ ಮಗಳೊಂದೂ ಬ್ಯಾಡ. ಗೌರನಂತ ಒಳ್ಳೆ ಬುದ್ಧಿದ್ದ ಗೂಡೆನ ತಂದರೆ ಸಾಕ್.'

ಮುತ್ತಕ್ಕ ಕುಸಿಲೇ ಹೇಳ್ತ್.

'ಜೀವನ್...'

'ಹ್ಞಾಂ ?'

'ನೀನ್ ಹೋಗಿ ಆ ಫ್ಯಾಕ್ಟ್ ಮಾದಯ್ಯನ ಕರ್ಕಂಡ್ ಬಾ.'

ದೇವಯ್ಯ ಹೇಳ್ತ್. ಜೀವನ್ ಕಾರ್ ತಕಂಡ್ ಹೋಗಿ ಒಂದ್‌ಗಳಿಗೆಲಿ ಫ್ಯಾಕ್ಟ್ ಮಾದಯ್ಯನ ಕರ್ಕಂಡ್ ಬಾತ್.

'ನೋಡ್ ಮಾದಯ್ಯ, ನಿನ್ನ ಪೋಸ್ಟರ್ಸ್ ನನ್ನ ಮನಸ್ಸ್‌ನ ಬದ್ಲ್ ಮಾಡಿಟ್ಟ್. ನಾನೀಗ ಪೂರ್ಣ ಮನಸ್‌ನ ಚೇಂಜ್ ಮಾಡಿಯೊಳೆ. ನೀನ್ ಹೇಳ್ದಂಗೆ ನನ್ನ ರಂಜುಗೆ ಗೌರನ ತಾಕೆ ಎಲ್ಲವೂ ಒಪ್ಪಿಯೊಳೊ. ಬರುವ ಐತ್ವಾರ ಎಂಗೇಜ್‌ಮೆಂಟ್. ಅಲ್ಲಿಂದ ಮೂರನೇ ಐತ್ವಾರ ಮೊದ್ವೆ. ಎಂತ ಹೇಳಿಯಾ ?'

ದೇವಯ್ಯ ಸಣ್ಣಗೆ ಹಲ್ಲ್ ಕಿರ್ಕಂಡ್ ಹೇಳ್ತ್.

'ವೆರಿಗುಡ್, ಪರ್ವಾಗಿಲ್ಲೆ ನಿಮ್ಮ ಮನಸ್. ನೀವ್ ಇಷ್ಟ್‌ಬ್ಯಾಗ ಬದ್ಲಾದರೇಂತ ನಾನ್ ಗ್ಯಾನ ಮಾಡ್‌ತ್ಲೆ. ಥ್ಯಾಂಕ್ಯೂ ವೆರಿ ಮುಚ್. ನಾಡ್‌ಕೊಲ್ಲಿ ಮಾದಪ್ಪ ಒಳ್ಳೆಯಂವ. ಅವನ ಗ್ರಾಚಾರಕ್ಕೆ ಒಳ್ಳೆ ಮೆಣ್ಸ್ ಬೊಳ್ಳಿಗೆ ರೋಗ ಹಿಡ್ದ್ ಮನಾರ ಸತ್ತ್ ಹೋತ್. ಇನ್ನೀಗ ಅವಂಗೆ ಮೊದಲ್ನಂಗೆ ಹಣ ಕೂಡಿಕೆ ಚಾನ್ಸ್ ಇಲ್ಲೇಂತ ಹೇಳಿಕೆ ಆದ್ಲೆ.'

ಮಾದಯ್ಯನ ಮಾತಿಗೆ ದೇವಯ್ಯ ತಲೆ ಆಡ್ಸಿತ್.

'ಮುತ್ತೂ, ಕಾಫಿ ತಗಂಡ್ ಬಾ. ಇಲ್ಲಿವರೆಗೆ ನನ್ನ ಮನಸ್ಸ್‌ನ ಬದ್ಲ್ ಮಾಡಿಕೆ ಈ ಬೋರ್‌ಗುಡ್ಡೆಲಿ ಯಾರಿಗೂ ಸಾಧ್ಯ ಆತ್ಲೆ. ಆದರೆ ಇಂದ್ ಫ್ಯಾಕ್ಟ್ ಮಾದಯ್ಯ ಈ ವಿಷಯುಲಿ ಗೆದ್ದುಟು. ನೋಡ್ ಮಾದಯ್ಯ ನಾನೂ ಮುತ್ತಕ್ಕನೂ ಹತ್ತ್ ಗಂಟೆಗೆ ನಾಡ್‌ಕೊಲ್ಲಿ ಮಾದಪ್ಪನ ಮನೆಗೆ ಬಂದವೇಂತ ನೀನ್ ಹೋಗಿ ಹೇಳಿಬುಡ್.'

ದೇವಯ್ಯ ಹೇಳ್ತ್.

ಮುತ್ತಕ್ಕ ಕಾಫಿ ಮತ್ತೆ ಬಿಸ್ಕೆಟ್ ತಂದ್ ಟೀಪಾಯಿ ಮೇಲೆ ಮಡ್ಗಿತ್. ಕಾಫಿ ಕುಡ್ದ್ ಹೊರಟ ಮಾದಯ್ಯಂಗೆ

ಎಲ್ಲಿಲ್ಲದ ಕುಸಿ. ರಾತ್ರಿ ಇಡೀ ನಿದ್ದೆಗೆಟ್ಟ್ ಪೋಸ್ಟರ್ ಬರ್ದ್ ಅಂಟ್ಸಿ 24ಗಂಟೆ ಒಳಗೆ ಪ್ರತಿಫಲನೂ ಸಿಕ್ಕಿತ್. ಅಂವ ಸೀದ ನಾಡ್ ಕೊಲ್ಲಿ ಮಾದಪ್ಪನ ಮನೆಗೆ ಹೋತ್. ಮಾದಪ್ಪ ಈಸಿ ಚೇರ್‌ಲಿ ಬೇಜಾರಲಿ ಕುದ್ದಿತ್ತ್. ಗೌರ ಕ್ಯಾಂಬರೆಲಿ ಮರ್‌ಟ್ ಕಂಡ್ ಮಲ್ಗಿತ್ತ್.

'ಮಾದಪ್ಪಣ್ಣಾ, ಗೌರ ಎಲ್ಲಿ ?'

ಮಾದಯ್ಯ ಕೇಳ್ತ್.

'ಬಾ...ಮಾದಯ್ಯ ಒಳಗೆ ಉಟ್ಟ್. ಕುದ್ದ್‌ಕ. ಗೌರಾ...ನೋ ೯ ಡ ವ್ವಾ ಮಾದಯ್ಯ ಕರಿತಾ ಉಟ್ಟ್.'

ಮಾದಪ್ಪ ಮಗಳ್ನ ಕರ್‌ತ್.

ಸೊಲ್ಪಹೊತ್ತ್‌ಲಿ ಕಣ್ಣೊರಸ್ಕಂಡ್ ಬಂದ ಗೌರ ಬಾಗ್‌ಲಿಗೆ ಒರಗಿಕಂಡೇ ನಿತ್ತ್ ಕಂಡತ್. ಎಣ್ಣೆ ಸೋಕದ ತಲೆಕೂದಲ್ ಮುದ್‌ರಿಹೋದ ಬಟ್ಟೆ, ಬಾಡ್ದ ಮೊಕ, ಹೊಳ್ಪಿಲ್ಲದ ಕಣ್ಣ್...

ಮಾದಯ್ಯ ಒಮ್ಮೆ ಗೌರನ ಅಡಿಂದ ಮುಡಿವರೆಗೆ ನೋಡ್ತ್.

ನೋಡವ್ವ ಗೌರ, ನೀನ್ ಬೇಗ ಮಿಾದ್ ಒಳ್ಳೆ ಬಟ್ಟೆ ಹಾಕ. ಪೋಸ್ಟರ್ಸ್ ಅಂಟ್ಸಿ ನೆಂತ ನಾನ್ ಹೇಳ್‌ಕಾಕನ ನೀವು ಅಪ್ಪ ಮಕ್ಕ ಸೇರಿ ಬ್ಯಾಡಾಂತ ಹೇಳ್ದರಲ್ಲಾ ? ಈಗ ಗೊತ್ತಾತ್ತಾ ನನ್ನ ಐಡಿಯಾ ಎಸ್ಟ್ ಪ್ರಯೋಜನ ಆತ್‌ಂತ. ಈಗ ಹತ್ತ್ ಗಂಟೆಗೆ ಬೋರ್‌ಗುಡ್ಡೆ ದೇವಯ್ಯನೂ ಅವನ ಹೆಣ್ಣುನೂ ನಿಮ್ಮಲ್ಲಿಗೆ ಬಂದವೆ ಗಡ. ರಂಜನ್ ಮತ್ತೆ ಗೌರನ ಮೊದ್ವೆ ವಿಚಾರ ಮಾತಾಡಿಕೆ. ಬರೋ ಐತ್ವಾರ ಎಂಗೇಜ್‌ಮೆಂಟ್. ಅಲ್ಲಿಂದ ಮೂರನೇ ಐತ್ವಾರ ಮೊದ್ವೆ. ದೇವಯ್ಯನೇ ಈ ವಿಚಾರನ ನೀವ್‌ಗೆ ಹೇಳಿಕೆ ನನ್ನಕ್ಕಲೆ ಹೇಳಿ ಕಳ್ಸಿತ್.'

'ಇದೆಲ್ಲಾ ನಿಜವಾಗಿರ್ದಾ? ನಂಗ್ಯಾಕೋ ನಂಬಿಕೇ ಆದ್ಲೆ.'

ನಾಡ್‌ಕೊಲ್ಲಿ ಮಾದಪ್ಪ ಡೌಟ್‌ಲೇ ಹೇಳ್ತ್.

'ನಾನ್ ಎಂದಾದರ್ ನಿಮ್ಮೊಟ್ಟಿಗೆ ಸುಳ್ಳ್ ಹೇಳ್ದ್ ಉಟ್ಟಾ ಮಾದಪ್ಪಣ್ಣ?'

ಅಪ್ಪ ಮತ್ತೆ ಮಗಳ ಮೊಕಲಿ ಒಂದು ತರದ ನಗೆ ಮೂಡಿಬಾತ್. ಮೀರಂಗೂ ಕುಸೀ ಆತ್.

'ಅಲ್ಲ ಮಾದಯ್ಯಣ್ಣ ಇದ್ ಸುಳ್ಳ್ ಮನಿ ಅಲ್ಲಲಾ ?'

ಮೀರ ಸಂಶಯಲಿ ಮಾದಯ್ಯನ ಮೊಕ ನೋಡಿಕಂಡೇ ಕೇಳ್ತ್.

'ಅಯ್ಯೋ ಸಿವನೇ, ಇವರ್ನ ಹೆಂಗೆ ನಂಬ್ಸುದೂಂತಲೇ ಗೊತ್ತಾದ್‌ಲೆಲ್ಲಪ್ಪಾ, ಕಾರ್ ಕಳ್ಸಿ ನನ್ನ ಮನೆಗೆ ಕರ್ಸಿಕಂಡ್, ಕಾಫಿ ಕೊಟ್ಟ್, ಖುದ್ದ್ ದೇವಯ್ಯನೇ ಈ ವಿಷಯ ಹೇಳ್ದ್ ಮೀರಾ, ಹತ್ತ್ ಗಂಟೆಗೆ ಅವು ಬಂದವೆ. ಹೇಳ್ತ್‌ಲೇತ ಬ್ಯಾಡ, ನೀವು ಕಾಫಿನೋ, ಟೀನೋ ಮಾಡಿ ತಿಂಬಕೆ ಏನಾರ್ ಅಂಗ್ಡಿಂದ ತಂದ್ ಮೊಡ್ಗಿ. ಮತ್ತೆ ಮಾದಪ್ಪಣ್ಣಾ, ನನ್ನ ಕ್ಕಲೆ ಸೊಲ್ಪ ಹಣ ಉಟ್ಟ್ ಒಂದ್ ಹತ್ತ್ ಸಾವ್ರ ಇರ್ದು. ಅದರ್ನ ನಾನ್ ನೀವ್‌ಗೆ ಕೊಟ್ನೆ. ನೀವ್ ಕಡೆಗೆ ನಂಗೆ ಕೊಟ್ರಾತ್. ಬೋರ್‌ಗುಡ್ಡೆ ದೇವಯ್ಯನ ಬಂಗ್ಲೆಗೆ ಸೊಸೆಯಾಗಿ ಹೋಗೋ ಗೂಡೆ ಅಲ್ಲಾ ! ಕೆಮಿಲೂ, ಕುತ್ತಿಗೆಲೂ ಸೊಲ್ಪ ನಾದ್ರೂ ಚಿನ್ನದ ಮಾಲ್ ಇಲ್ದೆ ಹೋದ್ರೆ ಹೆಂಗೆ ?'

'ನಿನ್ನ ಉಪಕಾರನ ನಾನ್ ನನ್ನ ಜನ್ಮಲಿ ಮರಿಯಕಾದ್ಲೆ ಮಾದಯ್ಯ. ನಾ ನ್ ತಾರನ ಮನೆಗೂ ಒಮ್ಮೆ ಹೋಗಿ ಬನ್ನೆ. ಅವಳಕ್ಕಲೆ ಸೊಲ್ಪ ಹಣ ಕೇಳೊಕು. ನನ್ನ ಕೈಲಿ ಇರ್‌ಕಾಕನ ನಾನ್ ಅ ವ ಳಿ ಗೆ ಕೊಟ್ಟೊಳಿ. ಅವಳ ಗಂಡನ ಮನೆಲಿ ದರಿದ್ರ ಒಂದೂ ಇಲ್ಲೆ.'

ಮಾದಪ್ಪ ಹೇಳ್ತ್.

'ಸೆರಿ ನೀವ್ ನಾಳೆ ಒಮ್ಮೆ ಮ ಗ ಳ ಮನೆಗೂ ಹೋಗಿ ಬನ್ನಿ. ನಂಗೆ ಸೊಲ್ಪ ಅರ್ಜೆಂಟ್ ಕೆಲ್ಸ ಉಟ್ಟ್, ಮತ್ತೆ ಬನ್ನೆ.'

ಫ್ಯಾಕ್ಟ್ ಮಾದಯ್ಯ ಅಲ್ಲಿಂದ ಹೋತ್ ಸೋಪ್, ಟವಲ್‌ನ ಗೌರನ ಕೈಗೆ ಕೊಟ್ಟ್ ಮೀರ ಹೇಳ್ತ್.

'ಹೋಗಿ ಲಾಯ್ಕ ಮಿಾದ್‌ಬುಟ್ಟ್ ಬಾಕ.'

ಓದ್‌ತಾ ಇದ್ದ ಪುಸ್ತಕನ ಮೊಡ್ ಚಿಟ್ಟ್ ಸೀರೆ ಸೆರಗ್‌ನ ಸೊಂಟಕೆ ಸಿಕ್ಕಿಸ್ ಕಂಡ್ ಮೀರ ಅಡಿಗೆ ಮನೆಗೆ ಹೋತ್. ಕಾಫಿಗೆ ನೀರ್ ಇಟ್ಟ್ ಅವಳು ಹ ತ್ರ ದ ಬೇಕ್‌ರಿಗೆ ಹೋಗಿ ಒಳ್ಳೆ ಬಿಸ್ಕಟ್ ಮತ್ತೆ ಕೇಕ್ ತಗಂಡ್ ಬಾತ್.

'ದೇವಯ್ಯನೂ ಅವನ ಹೆಣ್ಣೂ ಖಾಲಿ ಕಾಫಿ ಕುಡಿಯಕಿಲ್ಲೇಂತ ಕಂಡದೆ. ಹಾಲ್ ಹಾಕಿ ಕುಡ್ದೆ ಅವ್ಕೆ ಅಭ್ಯಾಸ.'

ಮಾದಪ್ಪ ಹೇಳ್ತ್.

'ಅದ್ಕೆ ಈಗ ಏನ್ ಮಾಡ್ಣ. ನ ಮ್ಮ ದನದ ಕೊಟ್ಟಗೆಲಿ ಜೇಡ ಬಲೆ ಕಟ್ಟ್ಯಟ್ಟಲ್ಲ. ಈ ಸಂಗತಿ ದೇ ವ ಯ್ಯ ಅಂಕಲ್‌ಗೂ ಗೊತ್ತುಟ್ಟಲ್ಲ ಪಪ್ಪಾ.'

'ಸಣ್ಣ ಮಕ್ಕಳ ಬಾಯಿಲಿ ಇ ಷ್ಟ ದೊಡ್ಡ ಮಾತ್ ಹೇಳ್ಬಡ ಮೀರಾ'.

ಮಾದಪ್ಪ ಹೇಳಿಬುಟ್ಟ್ ಮನೆಂದ ಹೊರಗೆ ಹೋತ್.

ಹತ್ತ್ ಗಂಟೆಗೆ ಸೆರಿಯಾಗಿ ಬೋರ್ ಗುಡ್ಡೆ ದೇವಯ್ಯನೂ ಮುತ್ತಕ್ಕಿನೂ ಬಂದೊ. ಒಟ್ಟಿಗೆ ಜೀವನನೂ ಇತ್ತ್. ನಾಡ್‌ಕೊಲ್ಲಿ ಮಾದಪ್ಪನೂ ಮಕ್ಕಳೂ ಕುಸಿ ಮತ್ತೆ ಪ್ರೀತಿಂದ ಮಾತಾಡ್ಸಿದೊ. ಅಪ್ಪ ಮಕ್ಕಳ ಗುಣ, ನಡತೆ ಕಂಡ್ ಮುತ್ತಕ್ಕಿಗೆ ತುಂಬಾ ಕುಸಿ ಆತ್.

ಗೌರನ ಗ್ಗಬಂದ್ ಬರಿಲಿ ನಿಲ್ಸಿಬುಟ್ಟ್ ತಲೆ ಸವರಿಕಂಡ್ ಮುತ್ತಕ್ಕಿ ತುಂಬಾ ಮಾತಾಡ್ತ್.

'ಈ ಮೊದ್ವೆ ವಿಚಾರಲಿ ಅಣ್ಣಂಗಿಂತ

[20ನೇ ಪುಟ ನೋಡಿ]

ಹ್ಯಾಂಗೆ ಗೂಡೆಗಳ ಅರ್ಥಮಾಡಿಕೊಂಬೊದೂತಾ ?

ಈ ಗೂಡೆಗಳೇ ಹೀಂಗೆ ಅರ್ಥಮಾಡಿಕಂಬಕೆ ಆದುಲೆ
ಕರ್ದ್ಲಿಗೆ ಬಾದುಲೆ
ಎಂಥ ತೆಗ್ದ್‌ಕೊಟ್ಟರೂ ಮುಖ ದಪ್ಪ ಮಾಡಿಕಂಬೋದರ
ಬುಡ್ದುಲೆ...
ಪಾಪ ಬಸ್‌ಸಲಿ ಸೀಟಿಲ್ಲೆಲಾತ ನಾನ್ ನಿತ್‌ತ್ತಕಂಡ್
ಕುದ್ದ್‌ಕಂಬಕೆ ಹೇಳ್ರೆ...ಕಣ್ಣ್‌ನ ಅರಳಿಸಿಕಂಡ್
ನುಂಗಿ ಬಿಡುವಂಗೆ ನೋಡುವೆ
ಪಿಚ್ಚರ್ ನೋಡಿಕೆ ಹೋಕಾಕನ ರಶ್ ಉಟ್ಟಲ್ಲಾತ
ಟಿಕೇಟ್ ತೆಗ್ದ್‌ಕೊಟ್ಟನೇಂತ ಹೇಳ್ರೆ
ಸಿಟ್ಟ್ ಮಾಡಿಕಂಡ್ ಇಂಗ್ಲೀಷ್‌ಲಿ ನಾನ್‌ಸೆನ್ಸ್
ಸ್ಟುಪಿಡ್‌ತ ಬೈಕಂಡವೆ
ಪಾಪ ಹೆಣ್ಣ್‌ಮಕ್ಕಲ್ಲಾತ ಆಫೀಸಿಗೆ ಬಂದರೆ
ಅವರ ಕೆಲ್ಸನ ಬ್ಯಾಗ ಬ್ಯಾಗ ಮುಗ್ಸಿಕೊಟ್ಟರೆ
ಸುಟ್ಟ ಹೈದ ಹುಟ್ಟದ ಮೇಲೆ ಗೂಡೆಗಳ
ನೋಡ್ತೇಲೆ ಕಂಡದೇತಾ ಗೊಣಗುಟ್ಟುವೆ...
ಲಾಯ್ಕಲಿ ಸೋಕಿ ಮಾಡಿಕಂಡ್ ಪೌಲರ್ ಬಟ್ಟೆಹಾಕಿಕಂಡ್
ಹೊರ್‍ಪ ಗೂಡೆಗಳ ಅಪ್ಪಿ ತಪ್ಪಿ ನೋಡಿರೆ
ನಮ್ಮನ ಚುಡಾಯಿಸ್ಸದೇತಾ ಕಂಪ್ಲೈಂಟ್ ಕೊಟ್ಟನೇತೇಳಿ
ಹೆದ್‌ರ್ಸುವೆ...
ಗೂಡೆಗ ಮಾತ್ರ ಹೈದಂಗಳ ಹೃದಯನ ಕದ್ದ್
ಅವರ ಮನ್ಸ್ ಗೆದ್ದ್ ನಿದ್ದೆ ಕೆಡ್ಸಿ...
ಕಣ್ಣ ಕೋಲ್ಮಿಂಚ್‌ಲೇ ಶಾಖ್‌ಕೊಟ್ಟ್
ಕೈಗೇ ಸಿಕ್ಕದೇ ಹೈದಂಗಳ ಕಾಡುವೆ
ಈ ಪುತ್ಥಳಿ ಗೊಂಬೆಗ
ಛೇ ಹ್ಯಾಂಗಪ್ಪಾ ಈ ಗೂಡೆಗಳ ಅರ್ಥ ಮಾಡಿಕಂಬೊದು ?
ನಂಗೆ ಮನಿ ಬೊತ್ತ್...

○ ಕಾನೆಹಿತ್ಲ ಕೆ. ಜಯಪ್ರಕಾಶ್,
ಸೋಮವಾರಪೇಟೆ.

ಶಾಂತಿ

ನಮ್ಮಲ್ಲಿಂದ್ ಸತ್ಯನಾರಾಯಣ ಪೂಜೆ
ಭಟ್ಟ ಹೇಳ್ತಿತ್ತ್
ಓಂ ಶಾಂತಿ...ಶಾಂತಿ...ಶಾಂತಿ...
ಮೇಲೆ ಮನೆ ಶಾಂತಿ ಗೂಡೆ
ಓಡಿಕಂಡ್ ಬಾತ್ ಓ....ಓ...ಓ...ತ.

ಮಾಫಿ–ಕಾಫಿ

ಮೂಲೆ ಮನೆ ಚಾಂಪನ ಮಣಿ
ಕುಡ್ದದೊಂದು ಕುಪ್ಪಿ
ಮೇಲೆ ಮನೆ ರಾಂಪನ ತಮ್ಮ
ಹಾಕಿತ್ತಿಂದ್ ತೊಪ್ಪಿ
ಕುಪ್ಪಿ ತೊಪ್ಪಿ ಸೇರಿಕಂಡ್
ನಡ್ದೊಳಲ್ಲಿ ತಪ್ಪಿ
ತಪ್ಪಿ–ಗಿಪ್ಪಿ ನಡ್ದೊವ್ಕೆ
ಒಮ್ಮೆ ಮಾತ್ರ ಮಾಫಿ
ಮಾಫಿ ಸಿಕ್ತ್ ತೇಳಿಕಂಡ್
ಕುಡ್ದೊ ಅವು ಕಾಫಿ.

● ಪೊನ್ನೇಟಿ ಬಿ. ಸುನಿಲ್, ಭಾಗಮಂಡಲ

(ನಗೆ ಹನಿ)

ಚಾಮಿ ಹೈದಂಗೆ...

ಚಾಮಿ ಹೈದಂಗೆ,

ನೀನ್ ಬೆಂಗ್ಳೂರ್ ಬಿಟ್ಟ್ ಹೋದ ಮೇಲೆ ನಿನ್ನ ಮನೆ ಯವು ಯಾವ ಕಾಯ್ಲೆ ಇಲ್ಲದೆ ಆರಾಂ ಆಗಿ ಒಳೊ. ಎಲೌಕ್ಕು ಲಾಯ್ಕ ಊಟ ಸೇರ್‌ತ್ತವುಟ್ಟು. ಆ ಎದ್ರ ಮನೆ ಗೌಡ್ರ ಗೂಡೆ, ಮೇಲೆ ಮನೆ ಮಳಿಯಾಳ್ಚಿ, ಹಿಂದೆ ರೋಡ್ ಬೇಗಂ ಗೂಡೆ ಎಲ್ಲಾ ಅನ್ನ ನೀರ್ ಬುಟ್ಟ್ ಚಿನ್ಮಯ ಆಸ್ಪತ್ರೆ ಸೇರ್‍ಯೊಳೊ. ಆ ಬಾಮಿ ಕರೆ ಆಕ್ಯಯ್ಯ ಗೂಡೆ ನೀನ್ ಹದ್ನೈದ್ ದಿನದ ಒಳಗೆ ಬಾರದಿದ್ರೆ ಬಾಮಿಗೆ ಹಾರ್ನೆತ ತಿಂಗಳ ಹಿಂದೆ ಫೋನ್ ಮಾಡಿತ್ತ್. ಇನ್ನೂ ಹಾರ್ತ್ಲ ಗಡ. ಆ ಮೋಟ್ ಜೆಡೆ ಕುಳ್ಳಿ ಗೂಡೆನೂ ಆಗಾಗ ಫೋನ್ ಮಾಡ್ತಾ ಇದ್ದದೆ. ನೀನಿಲ್ಲಿಂದ ಹೋದ ಮೇಲೆ ಅಕ್ಕಪಕ್ಕದ ಜನ ಯಾವ ಭಯ ಇಲ್ಲದೆ ಅವರ ಮನೆ ಹೆಣ್ಣ್ ಮಕ್ಕಳ ಹೊರಗೆ ಬಿಡ್ತಾವೊಳೊ. ನಿನ್ನ ಕೊಡಗ್‌ಲಿ ನೋಡ್ದೆತ ಯಾರೊ ಹೇಳ್ದೊ. ನೀನ್ ಅಲ್ಲಿನ ಗೂಡೆಗಳ ಸುದ್ಧಿಗೆ ಹೋಗಿ ಮೈ ಕೈ ಹೊಡಿ ಮಾಡಿಕಣ್ ಬಡ. ನೀನ್ ಮನೆಗೆ ಬಾರದಿದ್ರೂ ಪರ್‍ವಾಗಿಲ್ಲೆ. ಒಮ್ಮೆ ಬಂದ್ ಈ ಗೂಡೆಗಳಿಗೆಲ್ಲ ಮುಖ ತೋರ್ಸಿ ಹೋಗು.

ವಿ. ಸೂ. : ಸುಮಾರ್ 25 ವರ್ಷದ, 6 ಅಡಿ ಎತ್ತರ, 40 ಕೆ.ಜಿ. ತೂಕ, ಹಿಪ್ಪಿ ಕೂದಲು [ಟೋಫನ್] ಕುರಚಲು ಗಡ್ಡ ಇರ್ದ [ಶೇವಿಂಗ್ ಸೆಟ್ ಇಲ್ಲೆ ಬುಟ್ಟ್ ಹೊವ್ಟ] ಈ ಲಕ್ಷಣಲಿ ಇರೋ ಹೈದ ನಿಮಿಗ್ಯಾರಿಗಾರ್ ಕಂಡರೆ [ಎಲ್ಲಾರ್ ಗೂಡೆಗಳ ಮಧ್ಯನೇ ಇದ್ದದೆ] ನಮಿಗೆ ತಿಳ್ಸಿ, ತಿಳ್ಸಿದವ್ಕೆ ಬಹುಮಾನ ಉಟ್ಟು.

● ಗೋವಿಂದಮ್ಮನ ಅ. ಪ್ರವೀಣಕುಮಾರ.

ಹೆಚ್ಚ್ಟ ಕುಸಿ ನಂಗೇ. ಈ ಮನೆಗೆ ಇನ್ನ್ ಬಾಕೆ ಹೆದ್ರೊಕೂತ ಇಲ್ಲೆಲ್ಲಾ.'

ಜೀವನ್ ಅಡಿಗೆ ಮನೆಗೆ ಹೋಗಿ ಮೀರ ನೊಟ್ಟ್‌ಗೆ ಹೇಳ್ತ್.

'ಅಲ್ಲದಿದ್ರೂ ಜೀವನ್ ಇನ್ನ್ ನಮ್ಮ ಮನೆಗೆ ಬಾಕೆ ಹೆದ್ರೊಕೂಂತ ಇಲ್ಲೆ. ಮೊದ್ಲಾಗಿದ್ರೆ ನಿಮ್ಮ ಅಂಗಳಕ್ಕೆ ನಮ್ಮ ಮನೆ ಕಾಣ್ತಿತ್ತ್. ಈಗ ನಿಮ್ಮ ಕಾಂಪೌಂಡ್ ಗೋಡೆನ ಎತ್ತರ್‌ಸಿದರ್‌ಂದ ಯಾರಿಗೂ ಕಾಂಬದ್‌ಲೆ.'

ಮೀರ ಹೇಳ್ತ್.

ಅಪ್ಪ ಆಕಾಸದವರೆಗೆ ಗೋಡೆ ಎತ್ತ್ರ್ಸಿದ್ರೂ ಸೆರಿ ಮಕ್ಕ ಮನ್ಸ್ಸ ಮಾಡ್ರೆ ಅದರ್‌ನ್ನ ಬೀಳ್ಸಿ ಹಾಕಿಕೆ ಕಷ್ಟ ಏನೂ ಇಲ್ಲೆ.

ಜೀವನ್ ಹೇಳ್ತ್.

'ಅಯ್ಯೋ ಗೋಡೆನ ಬೀಳ್ಸಿ ಬುಡ್ಪಡ ಜೀವನ್, ಆ ಗೋಡೆ ಮೊದ್ಲೇ ಎತ್ತರ ಇದ್ದಿದ್ರೆ ಈ ಮೊದ್ವೆ ನಡೀತಿತ್ತ್‌ಲೆ.'

'ಯಾಕೆ ಮೀರ ಹಂಗೆ ಹೇಳ್ತಾ ಒಳ? ನಿಂಗೆ ಈ ಮೊದ್ವೆ ಇಷ್ಟ ಇಲ್ಲ್ಯಾ?'

ಜೀವನ್ ಕೇಳ್ತ್.

'ನೀನ್ ಏನ್ ಬೇಕರೆ ಹೇಳ್ ಜೀವನ್, ನಿನ್ನ ಡ್ಯಾಡಿ ಮತ್ತೆ ಅಣ್ಣನ ನಂಗ್ಯಾಕೊ ನಂಬಿಕೇ ಆದುಲೆ'

ಅವ್ಳ ಜೀವನ್‌ಗೆ ಮಾತ್ರ ಕೇಳುವಂಗೆ ಹೇಳ್ತ್.

'ಇದ್ ನಾವೆಲ್ಲ ಹೇಳಿ ಒಪ್ಪಿದ ಮೊದ್ವೆ ಮೀರಾ. ಇದರ್ಲಿನಿಂಗೆ ಯಾವ ಸಂಶಯವೂ ಬೇಡ, ಡ್ಯಾಡಿಗೆ ಚೂರ್ ಕೂಡ ಮನ ಸಿತ್ತ್‌ಲೆ. ಆ ಫ್ಯಾಕ್ಟ್ ಮಾದಯ್ಯಂಗೆ ಮೊದ್ಲ್ ಥ್ಯಾಂಕ್ಸ್ ಹೇಳೊಕು.

'ಏನೊ, ಎಲ್ಲಾ ಆದ ಮ್ಯಾಲೆ ತಾನೆ ಗೊತ್ತಾದು' ಮೀರ ನಿಟ್ಟುಸಿರ್ ಬುಟ್ಟತ್.

* * *

ಮಾರ್ನೆ ದಿನ ಬೆಳಿಗ್ಗೆ ಹತ್ತ್ ಗಂಟೆಗೆ ಬೋರ್‌ಗುಡ್ಡೆ ದೇವಯ್ಯ ಸೀದ ಸೆಂಟ್ರಲ್ ಜೈಲ್ಗೆ ಹೋತ್. ಗಾಳಿಮರ ಸೋಮಯ್ಯನ ಮಣ ಚಂಗುಮಣಿನ ಕಾಂಬಕೆ.

ಒಬ್ಬ ವಾರ್ಡರ್ನ್ ಚಂಗುಮಣಿನ ಕರ್ಕಂಡ್ ಬಾತ್.

'ಈಗಾದ್ರೆ ನನ್ನ ಗ್ಯಾನ ಬಾತಲ್ಲ ಸಾರ್ ನಿಮ್ಗೆ?'

ಚಂಗು ಮಣಿ ಕೇಳ್ತ್.

[ಸಶೇಷ]

ಸೋಮಾರಿ ಕೆಂಚು

ಒಂದ್ಸಲ ಅಪ್ಪನೊಟ್ಟ್‌ಗೆ ಕೆಂಚು ಆಸ್ತಿ ಪಾಲ್ ಕೇಳ್ತ್. ಆಗ ಅಪ್ಪ ನಾನ್ ಕಷ್ಟ ಪಟ್ಟ್ ಎದೆ ಹೊಡಿಮಾಡ್ದ ಆಸ್ತಿಲಿ ಈಗ ಪಾಲ್ ಕೇಳಿಯಾ? ಪಳ್ಳ ಫಸ್‌ಲ್ಗೆ ಬಾತ್‌ತ ಗೊತ್ತಾತೇನೋ. ಆಗ ಮನೆ ಬುಟ್ಟ್ ಹೋಗು. ನಂಗೆ ಗೊತ್ತುಟ್ಟು, ನನ್ನ ಆಸ್ತಿ ನೋಡಿಕಣಿತ ಅಪ್ಪ ಒಂದೇಸಮನೆ ಹೇಳಿ ಕೊಡ್ತ್. ಕೆಂಚು ಜಾಗ ಪಾಲ್ಮಾಡಿ ಲಾಯ್ಕ ಮದುವೆ ಆಕ್‌ತ್ತಿತ್ತ್. ಇಂವ ಪುನಃ ಹಿಂಗೆ ಹೇಳ್ತ್, ಅಪ್ಪ ಮಾಡ್ದ ಆಸ್ತಿ ಮಣಂಗಲ್ಲದೆ ಮತ್ಯಾರಿಗೆ? ಇಲ್ಲರೆ ನೀನ್ ಸಾಯಕನ ಹೊತ್ಕಂಡ್ ಹೋದ್ಯನೋ...ತೇಳ್ತ್.

ಅಪ್ಪನ ಮಣ್ಣನ ಬಾಯಿ ಕೇಳಿ ಅವ್ವ ಸೀರೆನಾ ಸಿಕ್ಸಿಕಂಡ್ ಓಡಿ ಬಾತ್. ಯಂಥಾ ಸಾವು, ಅಪ್ಪನು ಮಣನು ಜಾಗಕ್ಕಾಗಿ ಹಿಂಗೆ ತಾರಾಮಾರಾ ಬಾಯ್ಗೆಬಾಯಿ ಕೊಟ್ಟುಕ್ಕಂಬ್ದು ನೆರೆ ಕರೆವ್ಕೆ ಗೊತ್ತಾದ್ರೆ ಯಂಥಾ ಹೇಳ್ರೊ. ಅಂತೂ ಅಪ್ಪ ಹೇಳ್ದ ಮಾತ್ಯೆಲ್ಲ ಗಾಳಿಗೆ. ಅಪ್ಪನು ಮಣನು ಬಾಯಿ ಬೊಡ್ದ್ ಬೊಡ್ದ್ ಪೆಟ್ಟ್‌ಪಟ ಹತ್ತೆಬುಡ್ತ್. ಅವ್ವಂಗೆ ಯಾತ ಮಾಡ ಕುತ ಗೊತ್ತಾತ್ತ್ಲೆ. ಒಂದ್ಸಲ ಸುಮ್ಮನಿರಿ. ಏ...ಕೆಂಚು ನಿಂಗಾರ್ ಗೊತ್ಲೆ. ಅಪ್ಪ ಹಂಗೆ ಚೈ ಚೈ ಹೇಳ್ಕಂಡ್ ಇದ್ದದೆತ 'ತಾಳ್ದ ಮನ್ಸ ಬಾಳ್ದೆ ಗಡ'ತ ಅವ್ವ ಒಂದು ಗಾದೆನ ಬಿಗ್ತ್.

ಹಿಂಗೆಲ್ಲಾ ಆಗಿ ಹಣ ಸಮಾಧಾನ ಆದೊ. ಅವ್ವ ಮಣನ ಕಡೆ ಮಾತಾಡ್ಕೆ ಬಾರಿ ಉಸಾರ್. ಅಜ್ಜಂಗೆ ಮೊಸೆಲಿ ಸಿಟ್ಟ್‌ಬಂದ್ ಥೂ...ನಿನ್ನ ಹಣೆಬರ ಸುಡಿಕೆತ ಬೈತ್. ಅಯ್ಯೆಗೂ ಮಣಂಗೂ ನನ್ನ ಕಂಡರಾಕಿಲೆತೇಳಿ ಅಜ್ಜಿನ ಮುಖಕ್ಕೆ ಉಗ್ತ್. ಅಷ್ಟೊತ್ತಿಗೆಕೆಂಚು ಸುಮ್ಮನಿರ್ದ? ಅಪ್ಪನ ಪಡ್ನೆಟ್ಟ ಮೇಲೆ ಹಿಡ್ಕಂಡ್ ಆಸ್ತಿ ಕೊಟ್ಯಾ ಇಲ್ಯಾ ಬೊಗ್ಳ. ಮತ್ತೆ ನಾನ್ ಮಾಡ್ವ ಕೆಲ್ಸ ಬ್ಯಾರೆ ಉಟ್ಟು...ತಾ ರೇಗಿತ್.

ಆಗ ಅಪ್ಪ ನೀನ್ ಮನೆ ಬುಟ್ಟ್ ಓಡಿಯಾ, ಬೇಕಾ? ಇಲ್ಲರೆ ನಿನ್ನ ಜೇಪುನ ಚೋವಿಲಿ ಟುಸುಂ ಮಾಡ್ನೆ...ತ ಕೋವಿ ತಕಂಡ್ ಓಡಿ ಬಾತ್. ಇವ್ಕೆ ಕಾಳಗ ಹತ್ತಿದೆ. ಬಾಯಿ ಕೇಳಿ ನೆರೆಕರೆವ್ರ ಪಾಸಾಡಿಗಳಂಗೆ ಓಡಿ ಬಂದ್, ಯಂತಗಣ್ಣೆ ಅವರ್ದ್...ಂತ ಕೇಳ್ದೊ. ಅಜ್ಜಿ ಇದ್ದ ಸಂಗತಿನ ಇದ್ದಂಗೆ ಹಿಂಗಿಂಗೆತ ಹೇಳ್ತ್. ಮತ್ತೆ ನೆರೆಮನೆವ್ರು ಸಮಾಧಾನ ಮಾಡಿ ತೀರ್ಮಾನ ಮಾಡ್ದೊ. ಬಂದವ್ಕೆ ಏನಾರ್ ತಿಂಬಕ್ಕೆ ಆಕು ತೇಳಿ ಅಜ್ಜಿ ಅಜ್ಜನ ಕುಪ್ಪಿ ತಕಂಬಾಕೆ ಕಳ್ಸಿ, ರೊಟ್ಟೆ ತಟ್ಟ್‌ಕ್ಕೆ ಸುರ್‌ಮಾಡ್ತ್. ಎಲ್ಲಾ ಆತ್ ಕಡೆಗೆ ನೆರೆಕರೆವು ಲಾಯ್ಕ ಕೇತಿ, [ತಿಂದ್] ಕಳ್ಳ ಕುಡ್ದ್ ಬಾಯಿಬೊಡ್ಕಂಡ್ ಅವರವರ ಪಾಡಿಗೆ ಹೋದೋ.

ಮಾರನೆ ದಿನ ಇಡೀ ಊರವ್ಕೆ ಅಪ್ಪಂಗೂ ಮಣಂಗೂ ಪೆಟ್ಟ್‌ಪಟ ಆದ ಸುದ್ಧಿ ಟಾಂ ಟಾಂ ಆಗೋಟು. ಮತ್ತೆ ಕೆಂಚುಗೆ ಯಾವುದಾದರ್ ಗೂಡೆಗ ಒಪ್ಪುವ್ಯಾತ.

○ ವಾಟೇರಿ ರೀನಾ ಪೂವಯ್ಯ, ಮದೆನಾಡು.

ಪ್ರೀತಿಯ ಕಣ್ಮಣಿ ನೇಹ



4ನೇ ತರಗತಿ, ಸೇಂಟ್ ಚಾರ್ಲ್ಸ್
ಕಾನ್ವೆಂಟ್, ಭದ್ರಾವತಿ

ಚೆಟ್ಟಿಮಾಡ ರವೀಂದ್ರ ಮತ್ತು ತನುಜಾರವರ ಪುತ್ರಿ

ನಿನ್ನ ಬಾಳು ಚಿರಾಯುವಾಗಲೆಂದು **8**ನೇ ವರ್ಷದ ಹುಟ್ಟು ಹಬ್ಬಕ್ಕೆ ಶುಭಾಶಯವನ್ನು ಕೋರುವ

ಚೆಟ್ಟಿಮಾಡ	ಕುಯ್ಯಮುಡಿ
ದಾದ ಮತ್ತು ಅವ್ವ	**ತಾತ ಮತ್ತು ಅಮ್ಮ**
ಹೊದ್ದೂರು	ಮೈಸೂರು

ಶು ಭಾ ಶ ಯ ಗ ಳು



ಕೊರಿಯರಾರು ಅಪ್ಪಣ್ಣ ರವಿಕುಮಾರ್ (ಸತ್ಯ)

ಅರೆಭಾಷಿಕರ ಕಣ್ಮಣಿ ಕೂಸಾಗಿ, ನಿಮ್ಮ ಈ ದೊಡ್ಡ ಸಾಧನೆಗೆ ಸಿಕ್ಕಿದ "ಭಾರತ್ ಶ್ರೀ" ಮತ್ತೆ "ಭಾರತ್ ಗೌರವ್" ಪ್ರಶಸ್ತಿಗೆ ನಾವ್ಗೆ ಹೆಮ್ಮೆ. ಮುಂದೆ ನೀವ್ ಮಾಡ್ವ ಘನಕಾರ್ಯಕ್ಕೆ ನಮ್ಮ ಶುಭ ಹಾರೈಕೆಗ

ಪಟ್ಟಡ ಶೀಲಾಮಣಿ ಪ್ರಭಾಕರ್ ಮತ್ತು ಕೊಡಗು ಸಂಗಾತಿ ಬಳಗ

ಅರೆಭಾಷಿಕರ ಸಂಗತಿಯೇನ್ !

ಕೊಡಗು ಸಂಗಾತಿ ಪ್ರಿಯ ಓದುಗರೆ,

ಕರ್ನಾಟಕ ರಾಜ್ಯದ ಕೊಡಗು ಜಿಲ್ಲೆಯ ಮುಖ್ಯ ಜನವಾಹಿನಿಯಲ್ಲಿ ಅರೆಭಾಷಿಕ ಜನತೆಯು ಒಂದೆನ್ನುವುದನ್ನು ಯಾರು ಮರೆಯಲಾಗದು. ಕೊಡಗಿನಲ್ಲಿ ಮತ್ತು ಕನ್ನಡ ಜಿಲ್ಲೆಯಲ್ಲಿ ಅರೆಭಾಷಿಕ ಜನಾಂಗದವರ ಪಾತ್ರ ಬಹಳ ಕನಿಷ್ಠಯೆನಿಸುತ್ತಿದೆ. ಸಾರ್ವಜನಿಕ ರಂಗದಲ್ಲಾಗಲಿ, ಧಾರ್ಮಿಕ ರಂಗದಲ್ಲಾಗಲಿ, ಶೈಕ್ಷಣಿಕ ರಂಗದಲ್ಲಾಗಲಿ, ಸಾಂಸ್ಕೃತಿಕ ರಂಗದಲ್ಲಾಗಲಿ ಆದ್ಯತೆಯು ಮಾನ್ಯತೆಯು ಇಲ್ಲದಂತಾಗಿದೆ.

ಯಾಕೆ ಹೀಗಾಯ್ತು ? ಏನಿರಬಹುದು ? ಯಾರ ಲೋಪದೋಷಗಳು ? ಯಾರ ತಪ್ಪು ನೆಪ್ಪುಗಳು ? ಎಲ್ಲಿ ಎಡವಿದ್ದೇವೆ ? ಇದನ್ನು ಸರಿಪಡಿಸುವುದು ಹೇಗೆ ? ಇತ್ಯಾದಿಗಳು. ಹಾಗೆಯೇ ಅರೆಭಾಷೆ ಮತ್ತು ಜನಾಂಗದ ಭವಿಷ್ಯವೇನು ? ಅರೆಭಾಷೆಯು ನಡುಗನ್ನಡದ ಪಳೆಯುಳಿಕೆಯೇ ? ಅರೆಭಾಷಿಕ ಜನಾಂಗವು ವಿಶಿಷ್ಟ ಪಂಗಡವೇ ? ಹತ್ತು ಕುಟುಂಬ ಹದಿನೆಂಟು ಗೋತ್ರದವರಿಗೂ ಪುರೋಹಿತ ಶಾಹಿ ವರ್ಗಕ್ಕೂ ಏನಾದರು ಹತ್ತಿರದ ನೆಂಟಸ್ಥಿಕೆಯಿದೆಯೇ? ಮತ್ತು ಗೌಡ ಜನಾಂಗಕ್ಕೆ ಸುಮಾರು 7000 ವರ್ಷಗಳ ಚರಿತ್ರೆಯಿದೆಯೇ ಇತ್ಯಾದಿ ಇತ್ಯಾದಿಗಳು.

21ನೇ ಶತಮಾನಕ್ಕೆ ಕೊಂಡೊಯ್ಯುತ್ತಿರುವ ಜನವಾಹಿನಿಯೆಂಬ ಈ ನಾಡಿನ ರಥಯಾತ್ರೆಯಲ್ಲಿ ನಮ್ಮ ಜನಾಂಗವು ಯಾವ ರೀತಿಯಲ್ಲಿ ಮುನ್ನುಗ್ಗಿ ಮುಂದೆ ಸಾಗಬಹುದು ? ಈ ಬಗ್ಗೆ ಸಂಗಾತಿಯು ಓದುಗರಿಂದ ತಮ್ಮ ಅನಿಸಿಕೆಗಳನ್ನು ಪತ್ರಿಕೆಯ ಒಂದು ಅಥವಾ ಎರಡು ಪುಟಗಳಿಗೆ ಸೀಮಿತವಾಗಿರುವ ವಿಮರ್ಶಾತ್ಮಕ ಲೇಖನವನ್ನು ಆಹ್ವಾನಿಸುತ್ತದೆ. ಪ್ರಕಟಿಸಲು ಯೋಗ್ಯವಾಗಿರುವ ಉತ್ತಮ ಲೇಖನವನ್ನು ಹಂತ ಹಂತವಾಗಿ ಕಂತುಗಳ ಮೂಲಕ ನೀಡಲು ಸಂಗಾತಿ ಬಯಸಿದೆ.

ಲೇಖನವು ಯಾವುದೇ ರಾಗದ್ವೇಷ ಮತ್ತು ರಾಜಕೀಯ ಪ್ರೇರಿತವಾಗಿರಬಾರದು. ಸೌಹಾರ್ದತೆಯು ಪ್ರಮುಖ ಅಂಶವಾಗಿರಲಿ.

—ಸಂಪಾದಕಿ

K.R.N.N. 240 10-01-96 TCI Kar. 09592



ಶ್ರೀ ಶಿವರಾಜ್ ಪಾಟೀಲ್, ಮಾಜಿ ಲೋಕಸಭಾ ಸ್ಪೀಕರ್‌ನವರಿಂದ ಭಾರತ್‌ಶ್ರೀ ಮತ್ತು ಭಾರತ್‌ಗೌರವ್ ಪ್ರಶಸ್ತಿಯನ್ನು ಶ್ರೀ ಕೊರಿಯರು ಅಪ್ಪಣ್ಣ ರವಿಕುಮಾರ್‌ನವರು ಸ್ವೀಕರಿಸುತ್ತಿದ್ದಾರೆ.



ಶ್ರೀ ಕೊರಿಯರು ಅಪ್ಪಣ್ಣ ರವಿಕುಮಾರ್‌ನವರು ಸಂತಸದ ಕ್ಷಣವನ್ನು ಮಾಜಿ ಲೋಕಸಭಾ ಅಧ್ಯಕ್ಷರಾದ ಶ್ರೀ ಶಿವರಾಜ್ ಪಾಟೀಲ್ ಹಾಗೂ ಇನ್ನಿತರ ಗಣ್ಯರ ಜೊತೆ ಹಂಚಿಕೊಳ್ಳುತ್ತಿರುವುದು.

Printed by M.K. Thammaiah and Published by Kodagu Sangathi on behalf of Pattada P. Sheelamani and Printed at ASHIRWAD PRINTERS 180/A, 6th Main, Vinayakanagar, Mysore - 12. Published at Mysore, Editor PATTADA P. SHEELAMANI, No. 35, 1st Cross, 4th Block, Near Divisional Telephone Office) Jayalakshmipuram, Mysore - 570 012, Phone : 0821 - 516771